॥ ಶ್ರೀಃ ॥

ಲೇಖಕನ ನುಡಿ

ಶ್ರೀಹರಿಯ ಪ್ರೇರಣೆಯಿಂದ ಪ್ರಸ್ತುತ ಕೃತಿಯಲ್ಲಿ ಶ್ರೀ ಋಷಿಪಂಚಮೀ ವ್ರತ, ಶ್ರೀವಿಷ್ಣುಪಂಚಕ ವ್ರತ ಹಾಗೂ ಶ್ರೀ ಭೀಷ್ಮಪಂಚಕ ವ್ರತಗಳ ಕುರಿತು ಉಪಯುಕ್ತ ಮಾಹಿತಿಯನ್ನು ನೀಡಿ, ಶ್ರೀವಿಷ್ಣುಪಂಚಕ ವ್ರತದ ಕುರಿತಂತೆ ಶ್ರೀ ಶ್ರೀ 1008 ಶ್ರೀ ವಿದ್ಯಾಧೀಶತೀರ್ಥರ ಹಾಗೂ ಶ್ರೀ ಶ್ರೀ 1008 ಶ್ರೀ ಸತ್ಯಾಭಿನವತೀರ್ಥರ ವಿಷ್ಣುಪಂಚಕ ನಿರ್ಣಯಗಳ ಪೂರ್ಣ ಪಾಠವನ್ನು ಕೊಟ್ಟಿದ್ದೇನೆ.

ಈ ಕೃತಿಯನ್ನು ನಮ್ಮ ಕುಲಸ್ವಾಮಿಯಾದ ಶ್ರೀ ಶ್ರೀನಿವಾಸದೇವರ ಅಡಿದಾವರೆಗಳಲ್ಲಿ ಭಕ್ತಿಪೂರ್ವಕ ಸಮರ್ಪಿಸಿದ್ದೇನೆ.

ಕೃತಿಯ ಸಂಪಾದನ ಕಾರ್ಯದಲ್ಲಿ ಮಾರ್ಗದರ್ಶನ ಮಾಡಿದ ನನ್ನ ವಿದ್ಯಾಗುರುಗಳಾದ ಪಂ॥ ತ್ರಿವಿಕ್ರಮಾಚಾರ್ಯ ಉಮರ್ಜಿ ಅವರಿಗೆ ನನ್ನ ಕೃತಜ್ಞತಾ ಪೂರ್ವಕ ಶಿ॥ ಸಾ॥ ನಮಸ್ಕಾರಗಳು.

ಕೃತಿಯ ಪ್ರಕಟನಾ ಕಾರ್ಯದಲ್ಲಿ ಅನೇಕ ಸಲಹೆ ಸೂಚನೆಗಳನ್ನಿತ್ತ, ಹಾಗೂ ಶ್ರೀ ಶ್ರೀ ವಿದ್ಯಾಧೀಶತೀರ್ಥರ ಮತ್ತು ಶ್ರೀ ಶ್ರೀ ಸತ್ಯಾಭಿನವತೀರ್ಥರ ವಿಷ್ಣುಪಂಚಕ ನಿರ್ಣಯಗಳ ಪೂರ್ಣಪಾಠವನ್ನು ಒದಗಿಸಿಕೊಟ್ಟ ಶ್ರೀ ಪಂ॥ ಕೆ. ಜಿ. ಕಲಕೋಟಿ ಧಾರವಾಡ ಇವರಿಗೆ ನನ್ನ ಕೃತಜ್ಞತಾಪೂರ್ವಕ ಶಿ॥ ಸಾ॥ ನಮಸ್ಕಾರಗಳು.

ಶ್ರೀಯುತ ಆರ್. ಎಚ್. ಕುಲಕರ್ಣಿ, ಜಮಖಂಡಿ ಅವರು ತಮ್ಮ ಮಾತಾಪಿತೃಗಳಾದ ಶ್ರೀ ಹನುಮಂತರಾವ್ ಅಪ್ಪಾರಾವ್ ಕುಲಕರ್ಣಿ (ಅರ್ಜುಣಗಿ) ಹಾಗೂ ಶ್ರೀಮತಿ ಅಕ್ಕೂಬಾಯಿ ಹ. ಕುಲಕರ್ಣಿ (ಅರ್ಜುಣಗಿ) ಇವರ ಸ್ಮರಣಾರ್ಥ ಈ ಕೃತಿಯ ಮುದ್ರಣಕ್ಕೆ ಧನ ಸಹಾಯ ನೀಡಿ ಜ್ಞಾನಕಾರ್ಯವನ್ನು ಮಾಡಿದ್ದಾರೆ. ಅವರಿಗೆ ಶ್ರೀಹರಿವಾಯುಗುರುಗಳು ಜ್ಞಾನಾದಿಗಳನ್ನು ಕರುಣಿಸಲಿ.

ಕೃತಿಯ ಪ್ರಕಟಣಾಕಾರ್ಯದಲ್ಲಿ ನೆರವಾದ ನನ್ನ ತಮ್ಮ ಚಿ॥ ವಾದಿರಾಜ, ನನ್ನ ಸುಪುತ್ರ ಚಿ॥ ಆನಂದತೀರ್ಥ, ಅಳಿಯಂದಿರಾದ ಶ್ರೀ ರಾಘವೇಂದ್ರ ಅಡಬಡ್ಡಿ, ಇವರಿಗೆ ಶ್ರೀಹರಿವಾಯುಗಳು ಅನುಗ್ರಹಮಾಡಲಿ.

ಈ ಕೃತಿಯನ್ನು ಸಕಾಲದಲ್ಲಿ ಅಂದವಾಗಿ ಮುದ್ರಣ ಮಾಡಿಕೊಟ್ಟ ಮೆ॥ ಮನೋಹರ ಮುದ್ರಣಾಲಯ, ಧಾರವಾಡ ಅವರಿಗೆ ಧನ್ಯವಾದಗಳು.

ಈ ಕೃತಿಯಿಂದ ಶ್ರೀ ಹರಿವಾಯುಗುರುಗಳು ಸುಪ್ರೀತರಾಗಲಿ.

ವಿಜಾಪುರ　　　　　　　　　　ಇತಿ ಸಜ್ಜನ ಸೇವಕ

10-11-2005　　　　　　　　　ಶ್ರೀನಿವಾಸ ಸು. ಮಠದ

Rarest Archiver

Rarest Archiver

ಅನುಕ್ರಮಣಿಕಾ

I. ಶ್ರೀ ಋಷಿಪಂಚಮೀ ವ್ರತ

1) ಶ್ರೀ ಋಷಿಪಂಚಮೀ ವ್ರತ ಪರಿಚಯ 7

2) ಶ್ರೀ ಋಷಿಪಂಚಮೀ ವ್ರತ ಪೂಜಾ ವಿಧಿಃ 9

3) ಶ್ರೀ ಭವಿಷ್ಯೋತ್ತರ ಪುರಾಣೇ ಋಷಿಪಂಚಮೀ ಕಥಾ 19

II. ಶ್ರೀ ವಿಷ್ಣುಪಂಚಕ ವ್ರತ

1) ಶ್ರೀ ವಿಷ್ಣುಪಂಚಕ ವ್ರತ ಪರಿಚಯ 25

2) ಶ್ರೀ ವಿಷ್ಣುಪಂಚಕ ವ್ರತ ಕಥಾ 29

3) ಶ್ರೀ ವಿಷ್ಣುಪಂಚಕ ವ್ರತೋದ್ಯಾಪನಕ್ಕೆ ಬೇಕಾಗುವ ಪದಾರ್ಥಗಳು 35

4) ಶ್ರೀವಿಷ್ಣುಪಂಚಕ ವ್ರತೋದ್ಯಾಪನ ಪ್ರಯೋಗ 36

5) ಶ್ರೀ ಶ್ರೀ 1008 ಶ್ರೀಮದುತ್ತರಾದಿ ಮಠಾಧೀಶ
ಶ್ರೀ ವಿದ್ಯಾಧೀಶತೀರ್ಥ ವಿರಚಿತ ಶ್ರೀವಿಷ್ಣುಪಂಚಕ ನಿರ್ಣಯಃ 39

6) ಶ್ರೀ ವಿಷ್ಣುಪಂಚಕ ಲಕ್ಷಣ ಇತ್ಯಾದಿ 47

7) ಶ್ರೀ ಶ್ರೀ 1008 ಶ್ರೀ ಸತ್ಯಾಭಿನವತೀರ್ಥ ವಿರಚಿತ
ಶ್ರೀ ವಿಷ್ಣುಪಂಚಕ ನಿರ್ಣಯಃ 52

8) ಶ್ರವಣೋಪವಾಸ ನಿರ್ಣಯ 55

III. ಶ್ರೀ ಭೀಷ್ಮಪಂಚಕ ವ್ರತ

1) ಶ್ರೀ ಭೀಷ್ಮಪಂಚಕ ವ್ರತ 61

Rarest Archiver

Rarest Archiver

॥ ಶ್ರೀಃ ॥

ಶ್ರೀ ಋಷಿಪಂಚಮೀ ವ್ರತ ಪರಿಚಯ

ಇಷ್ಟಪ್ರಾಪ್ತಿ, ಅನಿಷ್ಟಪರಿಹಾರಕ್ಕಾಗಿ ಧರ್ಮ ಶಾಸ್ತ್ರಕಾರರು ಅನೇಕ ವ್ರತಗಳನ್ನು ವಿಧಿಸಿದ್ದಾರೆ. ಕೆಲವು ವ್ರತಗಳು ಪ್ರಾಯಶ್ಚಿತ್ತರೂಪವಾಗಿವೆ. ಅಂಥ ವ್ರತಗಳಲ್ಲಿ ಸ್ತ್ರೀಯರಿಗೆ "ಋಷಿಪಂಚಮೀ" ವ್ರತವು ವಿಧಿಸಲ್ಪಟ್ಟಿದೆ. ಇದನ್ನು ಭಾದ್ರಪದಮಾಸ ಶುಕ್ಲಪಕ್ಷದ ಪಂಚಮೀ ತಿಥಿಯಂದು ಆಚರಿಸಬೇಕು.

ರಜಸ್ವಲೆಯಾದ ಸ್ತ್ರೀಗೆ ಮುಟ್ಟಿನಿಂದ ಅಶುದ್ಧತೆ ಉಂಟಾಗುವದರಿಂದ ಮನೆಯಲ್ಲಿಯ ದೇವರ ಪೂಜಾ ಸಲಕರಣೆಗಳನ್ನಾಗಲೀ, ಇತರ ಧಾನ್ಯ ಪದಾರ್ಥಗಳನ್ನಾಗಲೀ, ಅವಳು ಮುಟ್ಟಕೂಡದು. ಹಾಗೆ ಸ್ಪರ್ಶಾದಿಗಳನ್ನು ಮಾಡಿದ್ದಾದರೆ ಪಾತಕವು ಸಂಭವಿಸುವುದರಿಂದ ಅದರ ಪರಿಹಾರಕ್ಕಾಗಿ ಪ್ರಾಯಶ್ಚಿತ್ತವು ಅವಶ್ಯಕವಾಗಿದೆ. ತಿಳಿದೋ ತಿಳಿಯದೆಯೋ ಸಂಭವಿಸುವ ಪಾಪಗಳನ್ನು ಕಳೆದುಕೊಳ್ಳಲು ಹಾಗೂ ಮುಟ್ಟಾಗಿರುವಾಗ ಮಾತು, ಮನಸ್ಸು, ದೇಹಗಳಿಂದ ಮಾಡಿದ ನಿಂದ್ಯಕರ್ಮಗಳಿಂದ ಬರುವ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ 'ಋಷಿಪಂಚಮೀ' ವ್ರತ ಮಾಡುವೆನೆಂದು ಸಂಕಲ್ಪಿಸಿ ಕಶ್ಯಪಾದಿ ಋಷಿಗಳ ಅಂತರ್ಗತರಾದ ಶ್ರೀವೇದವ್ಯಾಸ ಮಹರ್ಷಿಗಳಿಂದ ಅಭಿನ್ನರಾದ ಶ್ರೀ ಗೋಪಾಲಕೃಷ್ಣ ದೇವರನ್ನು ಪೂಜಿಸಿ, ಘಟಿಸಿದ ಪಾಪಗಳು ಪರಿಹಾರವಾಗಲೆಂದು ಪ್ರಾರ್ಥಿಸಿಕೊಳ್ಳಬೇಕು, ವ್ರತ ಕಥೆಯನ್ನು ಶ್ರವಣ ಮಾಡಬೇಕು.

ಈ ವ್ರತಕಥೆಯಲ್ಲಿ ನಾಯಿ ಮತ್ತು ಎತ್ತುಗಳು ಪರಸ್ಪರವಾಗಿ ಮಾತಾಡುವ ಪ್ರಸಂಗದ ಉಲ್ಲೇಖವಿದೆ. ಇದು ನಮಗೆ ಸ್ವಲ್ಪ ಅಸಂಭವವೆಂದು ತೋರುತ್ತದೆ. ಆದರೆ ಪುರಾಣ ಮೊದಲಾದ ಗ್ರಂಥಗಳಲ್ಲಿ ಇಂಥ ಅನೇಕ ಉದಾಹರಣೆಗಳಿವೆ– ರಾಮಾಯಣದಲ್ಲಿ ಕೇಕಯರಾಜನು ಪಕ್ಷಿಭಾಷಾತಜ್ಞನಾಗಿದ್ದನೆಂದು ತಿಳಿದು ಬರುತ್ತದೆ. ಶ್ರೀಮನ್ ಮಹಾಭಾರತದಲ್ಲಿ ನಲಮಹಾರಾಜನ ಜೊತೆಗೆ ಹಂಸಪಕ್ಷಿಗಳು ಸಂಭಾಷಣೆ ಮಾಡಿದ್ದನ್ನು ಉಲ್ಲೇಖಿಸಲಾಗಿದೆ. ಹಿಂದೆ ಪ್ರಾಣಿಗಳಿಗೆ ಮಾತಾಡುವ ಶಕ್ತಿ ಇತ್ತೆಂದೂ ಅಗ್ನಿಶಾಪದಿಂದ ಅದು ನಷ್ಟವಾಯಿತೆಂದು ಶ್ರೀಮನ್‌ಮಹಾಭಾರತದಿಂದ ತಿಳಿದುಬರುವುದು. ಶ್ರೀಮದ್ ಭಾಗವತದಲ್ಲಿ ಗಜೇಂದ್ರನು ಭಗವಂತನನ್ನು ಕುರಿತು ಸ್ತೋತ್ರಮಾಡಿ, ಭಗವಂತನ ಅನುಗ್ರಹದಿಂದ ಮೊಸಳೆಯಿಂದ ಬಂದ ವಿಪತ್ತಿನಿಂದ ಪಾರಾದ ಪ್ರಸಂಗವನ್ನು ಇಲ್ಲಿ ಗಮನಿಸಿದಾಗ ನಾಯಿ, ಎತ್ತುಗಳು ಸಂಭಾಷಣೆ ಮಾಡಿರುವುದು ಅಸಂಭವವೆನಿಸದು. ಪಾಶ್ಚಾತ್ಯ ತಜ್ಞರು ಕೂಡ ಪಶು ಪಕ್ಷಿಗಳಿಗೂ ಭಾಷೆ ಇದೆ ಎಂಬುದಾಗಿ ಕಂಡುಹಿಡಿದಿದ್ದಾರೆ.

Rarest Archiver

ವ್ರತವನ್ನು ಮಾಡುವವರು ಪ್ರಾತಃಕಾಲದಲ್ಲಿ ಎದ್ದು ಶ್ರೀಹರಿ ಸ್ಮರಣೆಮಾಡಿ ನಿತ್ಯಕರ್ಮಗಳನ್ನು ನೆರವೇರಿಸಿ ಮಧ್ಯಾಹ್ನ ಸಮಯಕ್ಕೆ ನದೀ, ಸರೋವರ ಮೊದಲಾದ ನಿರ್ಮಲ ಜಲಕ್ಕೆ ಹೋಗಿ ಸಂಕಲ್ಪ ಪೂರ್ವಕ ಸ್ನಾನಮಾಡಿ ಮಡಿಬಟ್ಟೆ ಧರಿಸಿ ಗದೆ, ಊರ್ಧ್ವಪುಂಡ್ರಗಳನ್ನು ಧಾರಣಮಾಡಿ ಕಶ್ಯಪಾದಿ ಋಷಿಗಳ ಪೂಜೆಯನ್ನು ಯಥಾವಿಧಿಯಾಗಿ ಮಾಡಬೇಕು. ಈ ವ್ರತಕಥೆಯನ್ನು ಶ್ರವಣ ಮಾಡಬೇಕು. ಬ್ರಾಹ್ಮಣರಿಗೆ ಸಂಕಲ್ಪ ಪುರಸ್ಸರವಾಗಿ ವಾಯನದಾನವನ್ನು ಕೊಡಬೇಕು. ಸಪ್ತರ್ಷಿಗಳು ಪ್ರೀತರಾಗಲಿ ಎಂದು ಪ್ರಾರ್ಥಿಸಿ ಮರುದಿನ ಉತ್ತರ ಪೂಜೆಯನ್ನು ಮಾಡಿ ಆವಾಹಿತ ದೇವತೆಗಳನ್ನು ವಿಸರ್ಜನೆ ಮಾಡಿ ಪಾರಣೆ ಮಾಡಬೇಕು. ಬ್ರಾಹ್ಮಣ ಸುವಾಸಿನೀ ಸ್ತ್ರೀಯರ ಭೋಜನ ಮಾಡಿಸಬೇಕು. ನಂತರ ತಾನು ಊಟ ಮಾಡಬೇಕು. ಋಷಿಪಂಚಮೀ ವ್ರತ ಉದ್ಯಾಪನವನ್ನು ಕೂಡ ಮಾಡಬೇಕು.

ಅಥ ಭಾದ್ರಪದೇ ಶುಕ್ಲ ಪಂಚಮ್ಯಾಮೃಷಿಪಂಚಮೀ ವ್ರತಮ್ ।
ತಚ್ಚ ಮಧ್ಯಾಹ್ನ ವ್ಯಾಪಿನ್ಯಾಂ ಕಾರ್ಯಮ್ ॥

ಎಂದು ಪ್ರಮಾಣದಂತೆ ಮಧ್ಯಾಹ್ನ ವ್ಯಾಪಿನೀ ಪಂಚಮೀ ತಿಥಿಯಂದು ಈ ವ್ರತವನ್ನು ಆಚರಿಸಬೇಕು.

ಈ ವ್ರತವನ್ನು ವಿಧಿವತ್ತಾಗಿ ಆಚರಿಸಿ ಉದ್ಯಾಪನ ಮಾಡುವುದರಿಂದ ರಜಸ್ಸಂಪರ್ಕ ದೋಷ, ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕಾದಿ ಎಲ್ಲ ದುಃಖಗಳಿಂದ ಮುಕ್ತರಾಗಿ ಮಂಗಲವನ್ನು ಹೊಂದುತ್ತಾರೆ ನಿಶ್ಚಿತ.

Rarest Archiver

॥ ಶ್ರೀಃ ॥

ಶ್ರೀ ಋಷಿಪಂಚಮೀ ವ್ರತ ಪೂಜಾ ವಿಧಿಃ

ಪ್ರಾತಃಕಾಲದಲ್ಲಿ ಶ್ರೀಹರಿಸ್ಮರಣ ಮಾಡುತ್ತ ಎಚ್ಚತ್ತು, ಪ್ರಾತರ್ವಿಧಿಗಳನ್ನು, ಮೃತ್ತಿಕಾ ಶೌಚಾದಿಗಳನ್ನು ಮಾಡಿಕೊಂಡು ಶುದ್ಧರಾಗಬೇಕು. ನಂತರ ದಂತಧಾವನವನ್ನು ಉತ್ತರಾಣಿ ಕಾಷ್ಠದಿಂದ ಮಾಡಿಕೊಳ್ಳಬೇಕು.

ವನಸ್ಪತಿ ಪ್ರಾರ್ಥನೆ :

ಆಯುರ್ಬಲಂ ಯಶೋ ವರ್ಚಃ ಪ್ರಜಾಃ ಪಶು ವಸೂನಿ ಚ ।
ಬ್ರಹ್ಮ ಪ್ರಜ್ಞಾಂ ಚ ಮೇಧಾಂ ಚ ತ್ವಂ ನೋ ದೇಹಿ ವನಸ್ಪತೇ ॥

ದಂತಧಾವನ ಮಂತ್ರ :

ಮುಖದುರ್ಗಂಧನಾಶಾಯ ದಂತಾನಾಂ ಚ ವಿಶುದ್ಧಯೇ ।
ಷ್ಠೀವನಾಯ ಚ ಗಾತ್ರಾಣಾಂ ಕುರ್ವೇಽಹಂ ದಂತಧಾವನಮ್ ॥

ದಂತಧಾವನವನ್ನು ಮಾಡಿಕೊಂಡು ಕನಿಷ್ಠ 108 ಸಾರೆ ಬಾಯಿ ಮುಕ್ಕಳಿಸಬೇಕು.

ಸ್ನಾನ ಸಂಕಲ್ಪ :

ಬ್ರಾಹ್ಮಣರ ಮೂಲಕ ಸಂಕಲ್ಪವನ್ನು ಹೇಳಿಸಿಕೊಳ್ಳಬೇಕು. (ಅನುಜ್ಞೆ ಪಡೆದು) ಆಚಮನ, ಪ್ರಾಣಾಯಾಮ, ದೇಶಕಾಲಗಳನ್ನುಚ್ಚರಿಸಿ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಇಹಜನ್ಮನಿ ಜನ್ಮಾಂತರೇಷು ರಜಸ್ವಲಾದೋಷ ಸಂಭಾವಿತ ಸಕಲಪಾಪನಿವೃತ್ಯರ್ಥಂ ಗಂಗಾದಿ ಸರ್ವತೀರ್ಥಸ್ನಾನ ಫಲಾವಾಪ್ತ್ಯರ್ಥಂ ಮನೋವಾಕ್ಕಾಯ ಶುದ್ಧ್ಯರ್ಥಂ ಕಶ್ಯಪಾದಿ ಸಪ್ತ ಋಷ್ಯಂತರ್ಗತ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀವೇದವ್ಯಾಸ ಪ್ರೇರಣಯಾ ಶ್ರೀವೇದವ್ಯಾಸ ಪ್ರೀತ್ಯರ್ಥಂ ಪುಣ್ಯನದ್ಯಾಂ ....ಸರೋವರೇ.... ತೀರ್ಥೇ ಷಷ್ಟ್ಯಧಿಕ ತ್ರಿಶತ (ಅಥವಾ ಅಷ್ಟೋತ್ತರಶತ ಯಥಾಶಕ್ತಿ) ವಾರಮವಗಾಹನ ಸ್ನಾನಾಖ್ಯಂ ಕರ್ಮಕರಿಷ್ಯೇ ॥ ಮೊದಲು ಗೋಮಯ, ಮೃತ್ತಿಕಾ ಸ್ನಾನವನ್ನು ಮಾಡಿ ಎಳ್ಳುನೆಲ್ಲಿ ಹಚ್ಚಿಕೊಂಡು ನಂತರ ಉತ್ತರಾಣಿ ಪತ್ರವನ್ನು ತಲೆಯಲ್ಲಿಟ್ಟುಕೊಂಡು ಮುಳುಗಿ ಸ್ನಾನ ಮಾಡಿ ಗಂಗಾದಿ ತೀರ್ಥಗಳಿಗೆ ಅರ್ಘ್ಯಕೊಟ್ಟು ಮತ್ತೆ ಮುಳುಗಿ ಆಚಮನ ಮಾಡಿ ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟು ಕೃಷ್ಣಾರ್ಪಣ ಹೇಳಬೇಕು.

ಗೋಮಯ ಸ್ನಾನ ಮಂತ್ರ—

ಅಗ್ರಮಗ್ರ ಚರಂತೀನಾಂ ಔಷಧೀನಾಂ ವನೇವನೇ ।
ತಾಸಾಂ ಋಷಭ ಪತ್ನೀನಾಂ ಪವಿತ್ರಂ ಕಾಯ ಶೋಧನಂ ॥

Rarest Archiver

ಮೃತ್ತಿಕಾ ಸ್ನಾನ ಮಂತ್ರ–

ಅಶ್ವಕ್ರಾಂತೇ ರಥಕ್ರಾಂತೇ ವಿಷ್ಣುಕ್ರಾಂತೇ ವಸುಂಧರೇ ।
ಶಿರಸಾಧಾರಯಿಷ್ಯಾಮಿ ರಕ್ಷಸ್ವ ಮಾಂ ಪದೇ ಪದೇ ॥
ಮೃತ್ತಿಕೇ ಹನ ಮೇ ಪಾಪಂ ಯನ್ಮಯಾ ದುಷ್ಕೃತಂ ಕೃತಂ ।
ತ್ವಯಾ ಹತೇನ ಪಾಪೇನ ಗಚ್ಛಾಮಿ ಪರಮಾಂಗತಿಮ್ ॥

ಗಂಗಾದಿ ತೀರ್ಥ ಸ್ನಾನ ಮಂತ್ರ–

ಗಂಗಾಗಂಗೇತಿ ಬ್ರೂಯಾತ್ ಯೋಜನಾನಾಂ ಶತೈರಪಿ ।
ಮುಚ್ಯತೇ ಸರ್ವ ಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥

ಅರ್ಘ್ಯ ಮಂತ್ರ (ಜಲಪುಂಡ್ರಧರಿಸಿ)–

ನಮಃ ಕಮಲನಾಭಾಯ ನಮಸ್ತೇ ಜಲಶಾಯಿನೇ ।
ನಮಸ್ತೇಽಸ್ತು ಹೃಷೀಕೇಶ ಗೃಹಾಣಾರ್ಘ್ಯಂ ನಮೋಽಸ್ತುತೇ ॥

(ಇಲ್ಲಿ ಕಶ್ಯಪಾದಿ ಸಪ್ತಋಷಿಗಳಿಗೂ ಅರ್ಘ್ಯ ಕೊಡುವದುಂಟು) ಮನೆಗೆ ಬಂದು ಮಡಿಯುಟ್ಟುಕೊಂಡು ಗದೆ, ಗೋಪೀಚಂದನ ಮುದ್ರಾಧಾರಣೆ ಮಾಡಿಕೊಂಡು ಪಂಚಗವ್ಯ ಪ್ರಾಶನ ಮಾಡಬೇಕು. ಸ್ತ್ರೀಯರು ಆಚಾರ್ಯರಿಂದ ಮಾಡಿಸಬೇಕು.

ಮಮಕಾಯ ಶುದ್ಧ್ಯರ್ಥಂ ಪಂಚಗವ್ಯ ಮೇಲನಂ ಕರಿಷ್ಯೇ ಎಂದು ಸಂಕಲ್ಪ ಮಾಡಿ ಗಾಯತ್ರೀ ಮಂತ್ರದಿಂದ ಗೋಮೂತ್ರವನ್ನು, ಗಂಧದ್ವಾರಾ ಮಂತ್ರದಿಂದ ಗೋಮಯವನ್ನು, ಆಪ್ಯಾಯಸ್ವ ಮಂತ್ರದಿಂದ ಹಾಲನ್ನು, ದಧಿಕ್ರಾವ್ಣಮಂತ್ರದಿಂದ ಮೊಸರನ್ನು, ಶುಕ್ರಮಸಿ ಜ್ಯೋತಿರಸಿ ಮಂತ್ರದಿಂದ ತುಪ್ಪವನ್ನು, ದೇವಸ್ಯತ್ವಾ ಮಂತ್ರದಿಂದ ಕುಶೋದಕವನ್ನು ಮತ್ತು ಆಪೋಹಿಷ್ಠಾ ಮಂತ್ರದಿಂದ (ಅಥವಾ ಓಂಕಾರದಿಂದ) ಬೆರೆಸಿ ಕೇಶವಾದಿ ನಾಮಗಳನ್ನು ಹೇಳುತ್ತ ಪ್ರಾಶನ ಮಾಡಬೇಕು.

ಪೂಜಾಸ್ಥಳವನ್ನು ಗೋಮಯದಿಂದ ಸಾರಿಸಿ ರಂಗವಲ್ಲಿ ಹಾಕಿ ಸರ್ವತೋಭದ್ರ ಮಂಡಲ ಮಾಡಿ, ವೇದಿಕೆಯ ಮೇಲೆ ತಾಮ್ರದ ಕೊಡವನ್ನು (ಬಿಂದಿಗೆ) ನೀರು ತುಂಬಿ ಇಡಬೇಕು. ಅದರ ಕುತ್ತಿಗೆಗೆ ವಸ್ತ್ರವನ್ನು ಪಂಚರತ್ನಗಳುಳ್ಳ ಹಾರ ಹಾಕಬೇಕು. ಫಲ ಗಂಧಾಕ್ಷತೆ ಹಿರಣ್ಯಗಳಿಂದ ಅಲಂಕರಿಸಬೇಕು. ಬಿದಿರಿನ ಅಥವಾ ಮಣ್ಣಿನ ತಳಿಗೆ (ತಟ್ಟೆ)ಯಲ್ಲಿ ಅಕ್ಕಿ ಹಾಕಿ ಅಷ್ಟದಲ ಪದ್ಮಬರೆದು ವಸ್ತ್ರದಿಂದ ಮುಚ್ಚಿ ಅಲ್ಲಿ ಸಪ್ತಋಷಿಗಳನ್ನು ಇರಿಸಿ ಭಕ್ತಿಯಿಂದ ಪೂಜಿಸಬೇಕು.

ಋಷಿಪಂಚಮೀ ಪೂಜಾ ಸಂಕಲ್ಪ :

ಆಚಮನ, ಪ್ರಾಣಾಯಾಮ, ದೇಶಕಾಲಗಳನ್ನು ಉಚ್ಚರಿಸಿ ಏವಂಗುಣ ವಿಶೇಷಣ ವಿಶಿಷ್ಟಾಯಾಂ, ಶುಭತಿಥೌ, ಮಮ ಇಹಜನ್ಮನಿ ಜನ್ಮಾಂತರೇ ವಾ ಬಾಲ್ಯ, ಕೌಮಾರ, ಯೌವನ, ವಾರ್ಧಕೇಷು, ಜಾಗ್ರುತ್, ಸ್ವಪ್ನ, ಸುಷುಪ್ತ್ಯಾವಸ್ಥಾಸು ವಾಙ್ಮನಃ ಕಾಯ

Rarest Archiver

ಕರ್ಮಭಿಃ, ಜ್ಞಾನತೋಽಜ್ಞಾನತಶ್ಚ ಸಂಭಾವಿತ ಸಮಸ್ತಪಾಪಪರಿಹಾರಾರ್ಥಂ, ಜನ್ಮ ಜನ್ಮಾಂತರೇಷು ವೈಧವ್ಯನಿವಾರಣಾರ್ಥಂ, ಇಹಜನ್ಮನಿ ಪೌತ್ರ, ಪ್ರಪೌತ್ರಾಭಿವೃದ್ಧ್ಯರ್ಥಂ, ಋತುಸಂಪರ್ಕಾದಿ ಜನಿತ ದೋಷ ಪರಿಹಾರಾರ್ಥಂ, ಅರುಂಧತೀ ಸಮೇತ ಕಶ್ಯಪಾದಿ ಸಪ್ತ ಋಷ್ಯಂರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವೇದವ್ಯಾಸ ಪ್ರೇರಣಯಾ ಶ್ರೀ ವೇದವ್ಯಾಸ ಪ್ರೀತ್ಯರ್ಥಂ ಋಷಿಪಂಚಮೀ ವ್ರತಾಂಗ ಅರುಂಧತೀ ಸಮೇತ ಕಶ್ಯಪಾದಿ ಸಪ್ತಋಷೀಣಾಂ ಆವಾಹನಾದಿ ಷೋಡಶೋಪಚಾರ ಪೂಜಾಂ ಕರಿಷ್ಯೇ ॥

ತತ್ರಾದೌ ನಿರ್ವಿಘ್ನತಾ ಸಿದ್ಧ್ಯರ್ಥಂ ಗಣಪತಿ ಪೂಜನಂ, ಕಲಶಪೂಜನಂ, ಘಂಟಾನಾದಂ ಚ ಕರಿಷ್ಯೇ ॥

ಗಣಪತಿ ಪೂಜಾ

ಓಂ ಗಣಾನಾತ್ವಾ.... ಮಂತ್ರದಿಂದ ಆವಾಹಿಸಿ ಪೂಜಿಸಿ
ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ ।
ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ ॥

ಎಂಬುದಾಗಿ ಪ್ರಾರ್ಥಿಸಬೇಕು.

ಕಲಶಪೂಜಾ : ಕಲಶಸ್ಯಮುಖೇ ವಿಷ್ಣುಃ ಮಂತ್ರದಿಂದ ಕಲಶಪೂಜೆ ಮಾಡಬೇಕು.

ಘಂಟಾನಾದ : ಆಗಮಾರ್ಥಂ ತು ದೇವಾನಾಂ ಮಂತ್ರದಿಂದ ಘಂಟಾನಾದ ಮಾಡಬೇಕು.

ಅಪವಿತ್ರಃ ಪವಿತ್ರೋವಾ ಸರ್ವಾವಸ್ಥಾಂಗತೋಪಿ ವಾ । ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥ (ತನ್ನನ್ನೂ ಪೂಜಾದ್ರವ್ಯಗಳನ್ನು ಕಲಶೋದಕದಿಂದ ಪ್ರೋಕ್ಷಿಸಬೇಕು) ತದಂಗ ಯಮುನಾ ಪೂಜಾಂ ಕರಿಷ್ಯೇ ॥ ಎಂದು ಸಂಕಲ್ಪಿಸಿ ಯಮುನಾ ಕಲಶವನ್ನು ಪೂಜೆ ಮಾಡಿ ನಂತರ ಕೈಯಲ್ಲಿ ಹೂವು ಮಂತ್ರಾಕ್ಷತೆ ಹಿಡಿದುಕೊಂಡು ಋಷಿಗಳ ಧ್ಯಾನ ಮಾಡಬೇಕು.

ಧ್ಯಾನಂ : ಮೂರ್ತಿಂ ಬ್ರಹ್ಮಣ್ಯ ದೇವಸ್ಯ ಬ್ರಹ್ಮಣ್ಯಂ ತೇಜ ಉತ್ತಮಮ್ ।
ಸೂರ್ಯಕೋಟಿ ಪ್ರತೀಕಾಶಮೃಷಿಬೃಂದಂ ವಿಚಿಂತಯೇ ॥
ಕಶ್ಯಾಪದಿ ಸಮಸ್ತ ಋಷಿಭ್ಯೋ ನಮಃ ॥ ಧ್ಯಾಯಾಮಿ ॥

ಆವಾಹನಮ್ :

1) ಕಶ್ಯಪಃ ಸರ್ವಲೋಕೇಡ್ಯಃ ಸರ್ವಶಾಸ್ತ್ರಾರ್ಥಕೋವಿದಃ । ನಾರೀಣಾಂ* ಪಾಪನಾಶಾಯ ಋಷಿ ರೂಪೇಣ ತಿಷ್ಠತಿ । ಕಶ್ಯಪಾಯನಮಃ । ಕಶ್ಯಪಂ ಆವಾಹಯಾಮಿ ॥

2) ಅತ್ರಯೇ ಚ ನಮಸ್ತುಭ್ಯಂ ಸರ್ವಭೂತ ಹಿತೈಷಿಣೇ । ತಪೋ ರೂಪಾಯ ಸತ್ಯಾಯ ಬ್ರಹ್ಮಣೇಽಮಿತ ತೇಜಸೇ । ಅತ್ರಯೇ ನಮಃ । ಅತ್ರಿಂ ಆವಾಹಯಾಮಿ ॥

---

* ನರಾಣಾಂ (ಪಾಠಾಂತರ)

3) ಭರದ್ವಾಜ ನಮಸ್ತುಭ್ಯಂ ಸದಾಧ್ಯಾನ ಪರಾಯಣ । ಮಹಾಜಟಿಲ ಧರ್ಮಾತ್ಮನ್ ಪಾಪಂ ಹರತು ಮೇ ಸದಾ । ಭರದ್ವಾಜಾಯ ನಮಃ । ಭರದ್ವಾಜಂ ಆವಾಹಯಾಮಿ ॥

4) ವಿಶ್ವಾಮಿತ್ರ ನಮಸ್ತುಭ್ಯಂ ಬಲಿಂ ಮಖ ಮಹಾವ್ರತಮ್ । ಅಧ್ಯಕ್ಷೀಕೃತಗಾಯತ್ರೀ ತಪೋ ರೂಪೇಣ ಸಂಸ್ಥಿತಃ । ವಿಶ್ವಾಮಿತ್ರಾಯ ನಮಃ । ವಿಶ್ವಾಮಿತ್ರಂ ಆವಾಹಯಾಮಿ ॥

5) ಗೌತಮಃ ಸರ್ವಭೂತಾನಾಂ ಋಷೀಣಾಂ ಚ ಮಹಾಪ್ರಿಯಃ । ಶ್ರೌತಾನಾಂ ಕರ್ಮಣಾಂ ಚೈವ ಸಂಪ್ರದಾಯ ಪ್ರವರ್ತಕಃ । ಗೌತಮಾಯ ನಮಃ । ಗೌತಮಂ ಆವಾಹಯಾಮಿ ॥

6) ಜಮದಗ್ನಿರ್ಮಹಾತೇಜಾಸ್ತಪಸಾ ಜ್ವಲಿತಃ ಪ್ರಭಃ । ಲೋಕೇಷು ಧರ್ಮ ಸಿದ್ಧ್ಯರ್ಥಂ ಸರ್ವಪಾಪ ನಿವರ್ತಕಃ ॥ ಜಮದಗ್ನಯೇ ನಮಃ । ಜಮದಗ್ನಿಂ ಆವಾಹಯಾಮಿ ॥

7) ನಮಸ್ತುಭ್ಯಂ ವಸಿಷ್ಠಾಯ ಲೋಕಾನಾಂ ವರದಾಯಚ । ಸರ್ವ ಪಾಪಪ್ರಣಾಶಾಯ ಸೂರ್ಯಾನ್ವಯ ಹಿತೈಷಿಣೇ । ವಸಿಷ್ಠಾಯಮಃ ವಸಿಷ್ಠಂ ಆವಾಹಯಾಮಿ ॥

8) ಅರುಂಧತಿ ನಮಸ್ತುಭ್ಯಂ ಮಹಾಪಾಪೌಘನಾಶಿನಿ । ಪತಿವ್ರತಾನಾಂ ಸರ್ವಾನಾಂ ಧರ್ಮಶೀಲ ಪ್ರವರ್ತಕೇ ॥ ಅರುಂಧತ್ಯೈ ನಮಃ । ಅರುಂಧತೀಂ ಆವಾಹಯಾಮಿ ॥

ಆಸನ : ಸುವರ್ಣಖಚಿತಂ ದಿವ್ಯಂ ನಾನಾರತ್ನ ಸಮನ್ವಿತಂ ।
ಆಸನಂ ಕಲ್ಪಿತಂ ತನ್ಮೇ ಗೃಹ್ಯತಾಂ ತು ಮುನೀಶ್ವರಾಃ ॥
ಆಸನಂ ಸಮರ್ಪಯಾಮಿ ॥

ಪಾದ್ಯ : ಗಂಧ ಪುಷ್ಪಾಕ್ಷತೈರ್ಯುಕ್ತಂ ಪಾದ್ಯಂ ಗೃಹ್ಣೀತ ವೈದ್ವಿಜಾಃ ।
ಪ್ರಸಾದಂ ಕುರುತ ಪ್ರೀತ್ಯಾ ತುಷ್ಟಾ ಭವತು ಮೇ ಸದಾ ॥
ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ ॥
ಪಾದ್ಯಂ ಸಮರ್ಪಯಾಮಿ ॥ (24 ಸಲ ಉದ್ಧರಣೆಯಿಂದ ನೀರನ್ನು ಅರ್ಘ್ಯ ಪಾತ್ರೆಯಲ್ಲಿ ಹಾಕುವದು.)

ಅರ್ಘ್ಯ : ನಭಸ್ಯ ಶುಕ್ಲ ಪಂಚಮ್ಯಾಂ ಅರ್ಚಿತಾ ಋಷಿಸತ್ತಮಾಃ ।
ದಹಂತು ಪಾಪಂ ಮೇ ಸರ್ವಂ ಗೃಹ್ಣಂತು ಅರ್ಘ್ಯಂ ನಮೋನಮಃ ॥

ಆರುಂಧತೀ ಸಹಿತ ಕಶ್ಯಪಾದಿ ಸಪ್ತ ಋಷಿಭ್ಯೋನಮಃ । ಅರ್ಘ್ಯಂ ಸಮರ್ಪಯಾಮಿ (24 ಸಲ ಅರ್ಘ್ಯವನ್ನು ಅರ್ಘ್ಯ ಪಾತ್ರೆಯಲ್ಲಿ ಹಾಕುವದು)

Rarest Archiver

ಆಚಮನೀಯ : ಲೋಕಾನಾಂ ತುಷ್ಟಿಕರ್ತಾರೋ ಯೂಯಂ ಸರ್ವೇ ತಪೋಧನಾಃ ।
ನಮೋ ವೋ ಧರ್ಮಶೀಲೇಭ್ಯೋ ಮಹರ್ಷಿಭ್ಯೋ ನಮೋ ನಮಃ ॥
ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ
ಆಚಮನೀಯಂ ಸಮರ್ಪಯಾಮಿ ॥ (24 ಸಲ ನೀರನ್ನು ಅರ್ಘ್ಯ ಪಾತ್ರೆಯಲ್ಲಿ ಆಚಮನಕ್ಕಾಗಿ ಬಿಡಬೇಕು.)

ಮಧುಪರ್ಕ : ದಧ್ಯಾಜ್ಯ ಮಧುಸಂಯುಕ್ತಂ ಮಧುಪರ್ಕಂ ಮಯಾ ಹೃತಂ ।
ಸ್ವರ್ಣಪಾತ್ರೇ ಸ್ಥಿತಂ ದಿವ್ಯಂ ಗೃಹ್ಣಂತು ಮುನಿಪುಂಗವಾಃ ॥
ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ ॥
ಮಧುಪರ್ಕಂ ಸಮರ್ಪಯಾಮಿ ॥ (ಮೊಸರು, ಜೇನುತುಪ್ಪ, ತುಪ್ಪ ಕಲೆಸಿ ಹೂವಿನಿಂದ ಎಲ್ಲರಿಗೂ ಪ್ರೋಕ್ಷಣ ಮಾಡಬೇಕು.)

ಪಂಚಾಮೃತ : ಪಯೋದಧಿ ಘೃತಶ್ಚೈವ ಶರ್ಕರಾಮಧುಸಂಯುತೈಃ ।
ಪಂಚಾಮೃತೈಶ್ಚ ಸ್ನಪನಂ ಕರಿಷ್ಯೇ ಋಷಿಸತ್ತಮಾಃ ॥
ಅರುಂಧತೀ ಸಹಿತ ಕಶ್ಯಪಾದಿ ಸಪ್ತ ಋಷಿಭ್ಯೋ ನಮಃ
ಪಂಚಾಮೃತ ಸ್ನಾನಂ ಸಮರ್ಪಯಾಮಿ ॥ (ಹೂವಿನಿಂದ ಋಷಿಗಳಿಗೆ ಸಿಂಪಡಿಸುವದು).

ಸ್ನಾನ : ಮಂದಾಕಿನ್ಯಾಃ ಸಮಾನೀತಂ ಯಮುನಾ ಗೌತಮೀಜಲಂ ।
ಕೃಷ್ಣಾಯಾ ನರ್ಮದಾಯಾಶ್ಚ ತೋಯಂ ಸ್ನಾನಾರ್ಥಮಾಹೃತಂ ॥
ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ ಶುದ್ಧೋದಕ ಸ್ನಾನಂ ಸಮರ್ಪಯಾಮಿ ॥ ಹೂವಿನಿಂದ ಕಲಶೋದಕ ನೀರನ್ನು ಪ್ರೋಕ್ಷಣ ಮಾಡಬೇಕು.

ವಸ್ತ್ರ : ಸರ್ವೇ ನಿತ್ಯಂ ತಪೋ ನಿಷ್ಠಾಃ ಬ್ರಹ್ಮಜ್ಞಾಸ್ಸತ್ವವಾದಿನಃ ।
ವಸ್ತ್ರಾಣಿ ಪ್ರತಿಗೃಹ್ಣಂತು ಮುಕ್ತಿದಾಃ ಸಂತು ಮೇ ಸದಾ ॥
ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ
ವಸ್ತ್ರ ಸಮರ್ಪಯಾಮಿ ॥ ಬಿಳಿ ವಸ್ತ್ರವನ್ನು ಎಲ್ಲರಿಗೂ ಏರಿಸಬೇಕು. (ಅರುಂಧತಿಗೆ ಕೆಂಪು ಹಚ್ಚಿದ ಗೆಜ್ಜೆವಸ್ತ್ರವನ್ನು ಏರಿಸಬೇಕು.)

ಉಪವೀತ : ನಾನಾಮಂತ್ರಸಮುದ್ಭೂತಂ ತ್ರಿವೃತಂ ಬ್ರಹ್ಮಸೂತ್ರಕಂ ।
ಪ್ರತ್ಯೇಕಂ ಚ ಪ್ರಯಚ್ಛಾಮಿ ಋಷಯಃ ಪ್ರತಿಗೃಹ್ಯತಾಂ ॥ (ಋಷಿಗಳಿಗೆ ಮಾತ್ರ ಜನಿವಾರವನ್ನು ಸಮರ್ಪಿಸಬೇಕು.)
ಕಶ್ಯಪಾದಿ ಸಪ್ತ ಋಷೀಣಾಂ ಉಪವೀತಂ ಸಮರ್ಪಯಾಮಿ ॥

Rarest Archiver

ಗಂಧ : ಕುಂಕುಮಾಗರು ಕರ್ಪೂರ ಸುಗಂಧೈರ್ಮಿಶ್ರಿತಂ ಶುಭಂ ।
ಗಂಧಾಢ್ಯಂ ಚಂದನಂ ದಿವ್ಯಂ ಗೃಹ್ಣಂತು ಋಷಿಸತ್ತಮಾಃ ॥
ಅರುಂಧತಿ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ
ಗಂಧಂ ಸಮರ್ಪಯಾಮಿ ॥ ಹೂವಿನಿಂದ ಗಂಧ ಅಕ್ಷತೆಯನ್ನು ಎಲ್ಲ
ಋಷಿಗಳಿಗೆ ಹಚ್ಚಬೇಕು.

ಅಕ್ಷತಾ : ಶುಭ್ರಾಕ್ಷತಾಶ್ಚ ಸಂಪೂರ್ಣಾಃ ಪ್ರಕ್ಷಾಲ್ಯ ಚ ನಿಯೋಜಿತಾಃ ॥
ಶೋಭಾಯೈ ವೋ ಮಯಾದತ್ತಾ ಗೃಹ್ಯತಾಂ ಮುನಿಸತ್ತಮಾಃ ॥
ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ ಅಕ್ಷತಾನ್
ಸಮರ್ಪಯಾಮಿ ॥ ಅಕ್ಷತೆಗಳನ್ನು ಏರಿಸಬೇಕು.

ಪುಷ್ಪ : ಮಾಲತೀ ಚಂಪಕಾದೀನಿ ತುಲಸ್ಯಾದೀನಿ ವೈದ್ವಿಜಾಃ ।
ಸಮರ್ಪಯಾಮಿ ಪುಷ್ಪಾಣಿ ಪೂಜಾರ್ಥಂ ವಃ ಪದಾಂಬುಜೇ ॥
ಅರುಧಂತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ ಪುಷ್ಪಾಣಿ
ಸಮರ್ಪಯಾಮಿ ॥

ಅರುಂಧತ್ಯೈ ನಮಃ ಹರಿದ್ರಾಚೂರ್ಣ ಕುಂಕುಮಾದೀನಿ ಕಂಠಸೂತ್ರ ತಾಟಂಕಾದ್ಯಾಭರಣಾನಿ ಸಮರ್ಪಯಾಮಿ ॥ ಅರುಂಧತಿಗೆ ಕಂಚುಕಿ ವಸ್ತ್ರ ಅರಿಶಿನ, ಕುಂಕುಮ, ಮಾಂಗಲ್ಯಾದಿಗಳನ್ನು ಸಮರ್ಪಿಸಬೇಕು.

ನಾಮಪೂಜಾ : ಓಂ ಕಶ್ಯಪಾಯನಮಃ । ಅತ್ರಯೇ ನಮಃ । ಭರದ್ವಾಜಾಯ ನಮಃ ।
ವಿಶ್ವಾಮಿತ್ರಾಯ ನಮಃ । ಗೌತಮಾಯ ನಮಃ । ಜಮದಗ್ನಯೇ ನಮಃ।
ವಸಿಷ್ಠಾಯ ನಮಃ । ಅರುಂಧತ್ಯೈ ನಮಃ । ಲೋಕವಂದಿತೇಭ್ಯೋ ನಮಃ।
ಬ್ರಹ್ಮರ್ಷಿಭ್ಯೋ ನಮಃ ॥

ಅಂಗ ಪೂಜಾ : ಓಂ ಲೋಕವಂದಿತಾಯ ನಮಃ ಪಾದೌ ಪೂಜಯಾಮಿ । ಬ್ರಹ್ಮಋಷಿಭ್ಯೋನಮಃ ಗುಲ್ಫೌ ಪೂಜಯಾಮಿ । ವೇದ ವಿದ್ಭ್ಯೋನಮಃ ಜಂಘೇ ಪೂಜಯಾಮಿ। ತಪಸ್ವಿನೇ ನಮಃ ಜಾನುನೀ ಪೂಜಯಾಮಿ। ಮಹಾತ್ಮನೇ ನಮಃ ಊರೂ ಪೂಜಯಾಮಿ । ಯೋಗಿನೇ ನಮಃ ಗುಹ್ಯಂ ಪೂಜಯಾಮಿ । ಅಗ್ನಿಹೋತ್ರ ಪರಾಯಣಾಯನಮಃ ನಾಭಿಂ ಪೂಜಯಾಮಿ । ಸತ್ಯವ್ರತೇಭ್ಯೋನಮಃ ಉದರಂ ಪೂಜಯಾಮಿ। ಗಾಯತ್ರೀಸಿದ್ಧೇಭ್ಯೋ ನಮಃ ವಕ್ಷಸ್ಥಳಂ ಪೂಜಯಾಮಿ। ಪೂತೇಭ್ಯೋ ನಮಃ ಬಾಹೂ ಪೂಜಯಾಮಿ । ವೇದವೇದಾಂತ ಪಾರಗೇಭ್ಯೋ ನಮಃ ಕಂಠಂ ಪೂಜಯಾಮಿ । ಶಾಪಾನುಗ್ರಹ ಶಕ್ತೇಭ್ಯೋ ನಮಃ ಮುಖಂ ಪೂಜಯಾಮಿ । ಜಿತೇಂದ್ರಿಯೇಭ್ಯೋ ನಮಃ ಕರ್ಣೌಪೂಜಯಾಮಿ ॥ ದೇವಗುರುಭ್ಯೋನಮಃ ನೇತ್ರೇ

Rarest Archiver

ಪೂಜಯಾಮಿ । ಜ್ಞಾನ ಸಿದ್ಧೇಭ್ಯೋ ನಮಃ ಲಲಾಟಂ ಪೂಜಯಾಮಿ । ಜಟಾಮುಕುಟ ಧಾರಿಭ್ಯೋ ನಮಃ ಶಿರಃ ಪೂಜಯಾಮಿ । ಅರುಂಧತೀ ಸಹಿತಾಯ ಕಶ್ಯಪಾದಿ ಸಪ್ತಋಷಿಭ್ಯೋ ನಮಃ ಸರ್ವಾಂಗಂ ಪೂಜಯಾಮಿ ॥ ಪ್ರತಿ ನಾಮವನ್ನು ಹೇಳುವಾಗ ಮಂತ್ರಾಕ್ಷತೆಗಳನ್ನು ಹಾಕುತ್ತಿರಬೇಕು.

ಪತ್ರಪೂಜಾ : ಕಶ್ಯಪಾಯ ನಮಃ ಮುನಿಪತ್ರಂ ಸಮರ್ಪಯಾಮಿ । ಅತ್ರಯೇ ನಮಃ ವಟಪತ್ರಂ ಸಮರ್ಪಯಾಮಿ । ಭರದ್ವಾಜಾಯ ನಮಃ ಅಶ್ವತ್ಥ ಪತ್ರಂ ಸಮರ್ಪಯಾಮಿ । ವಿಶ್ವಾಮಿತ್ರಾಯ ನಮಃ । ಅರ್ಕಪತ್ರಂ ಸಮರ್ಪಯಾಮಿ । ಗೌತಮಾಯನಮಃ ಅಪಾಮಾರ್ಗಪತ್ರಂ ಸಮರ್ಪಯಾಮಿ । ಜಮದಗ್ನಯೇ ನಮಃ ತಾಡಪತ್ರಂ ಸಮರ್ಪಯಾಮಿ । ವಸಿಷ್ಠಾಯ ನಮಃ ಕೇತಕೀಪತ್ರಂ ಸಮರ್ಪಯಾಮಿ । ಅರುಂಧತ್ಯೈ ನಮಃ ನಾನಾವಿಧ ಪತ್ರಾಣಿ ಸಮರ್ಪಯಾಮಿ ।

ಧೂಪ : ವನಸ್ಪತಿರಸೋದ್ಭೂತೋ ಗಂಧಾಡ್ಯೋಗಂಧ ಉತ್ತಮಃ । ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಮ್ ॥ ಅರುಂಧತೀ ಸಹಿತ ಕಶ್ಯಪಾದಿ ಸಪ್ತ ಋಷಿಭ್ಯೋ ನಮಃ । ಧೂಪಂ ಸಮರ್ಪಯಾಮಿ ॥

ದೀಪ : ಸಾಜ್ಯಂ ತ್ರಿವರ್ತಿ ಸಂಯುಕ್ತಂ ಅಂಧಕಾರ ವಿನಾಶನಂ । ದೀಪಂ ಗೃಹ್ಣೀತ ಭೋವಿಪ್ರಾಃ ಭಕ್ತ್ಯಾ ದತ್ತಂ ಮಯಾಧುನಾ ॥ ದೀಪಂ ದರ್ಶಯಾಮಿ ॥ ಅರುಂಧತೀ ಸಹಿತ ಕಶ್ಯಪಾದಿ ಸಪ್ತ ಋಷಿಭ್ಯೋ ನಮಃ ॥ ದೀಪಂ ದರ್ಶಯಾಮಿ ॥

ನೈವೇದ್ಯ : ನಾನಾ ಪಕ್ವಾನ್ನ ಸಂಯುಕ್ತಂ ರಸೈಃ ಷಡ್ಭಿಃ ಸಮನ್ವಿತಂ । ಗೃಹ್ಣಂತು ಋಷಯಃ ಸರ್ವೇ ನೈವೇದ್ಯಂ ಪ್ರದದಾಮ್ಯಹಮ್ । ಅರುಂಧತೀ ಸಹಿತ ಕಶ್ಯಾಪಾದಿ ಸಪ್ತ ಋಷಿಭ್ಯೋ ನಮಃ । ನೈವೇದ್ಯಂ ಸಮರ್ಪಯಾಮಿ । ಪ್ರತಿಯೊಬ್ಬ ಋಷಿಗಳ ಮುಂಭಾಗದಲ್ಲಿ ಬೇರೆ ಬೇರೆ ಹಣ್ಣು, ವೀಳ್ಯದೆಲೆ ಅಡಿಕೆ ಇಟ್ಟು ಒಬ್ಬೊಬ್ಬ ಋಷಿಗಳಿಗೂ ಅವರ ಹೆಸರು ಹೇಳಿ ನೈವೇದ್ಯ ಮಾಡಿ ಮಧ್ಯೆ ಮಧ್ಯೇ ಪಾನೀಯಂ ಸಮರ್ಪಯಾಮಿ । ಉತ್ತರಾಪೋಶನಂ ಸಮರ್ಪಯಾಮಿ । ಹಸ್ತ ಪ್ರಕ್ಷಾಲನಂ ಸಮರ್ಪಯಾಮಿ । ಆಚಮನೀಯಂ ಸಮರ್ಪಯಾಮಿ । ಎಂದು ಹೇಳಿ ಅರ್ಘ್ಯಪಾತ್ರೆಯಲ್ಲಿ 24 ಸಲ ಉದ್ಧರಣೆಯಿಂದ ನೀರು ಹಾಕಬೇಕು (ನಾನಾ ವಿಧ ಫಲಾನಿ ಸಮರ್ಪಯಾಮಿ ॥)

ತಾಂಬೂಲ : ಪೂಗೀಫಲ ಸಮಾಯುಕ್ತಂ ನಾಗವಲ್ಲೀ ದಲೈರ್ಯುತಂ । ಲವಂಗಾದಿಯುತಂ ವಿಪ್ರಾಃ ತಾಂಬೂಲಂ ಪ್ರತಿಗೃಹ್ಯತಾಮ್ । ಅರುಂಧತೀ ಸಹಿತ ಕಶ್ಯಪಾದಿ ಸಪ್ತ ಋಷಿಭ್ಯೋನಮಃ । ತಾಂಬೂಲಂ ಸಮರ್ಪಯಾಮಿ ॥

ದಕ್ಷಿಣೆ : ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ । ಅನಂತಪುಣ್ಯಫಲದಂ ಅತಃ ಶಾಂತಿಂ ಪ್ರಯಚ್ಛಮೇ । ಅರುಂಧತೀ ಸಹಿತ ಕಶ್ಯಪಾದಿ ಸಪ್ತ ಋಷಿಭ್ಯೋನಮಃ ॥ ಸುವರ್ಣಪುಷ್ಪ ದಕ್ಷಿಣಾನ್ ಸಮರ್ಪಯಾಮಿ ॥

Rarest Archiver

ಮಹಾನೀರಾಜನ : ಪಂಚವರ್ತಿ ಸಮಾಯುಕ್ತಂ ಸರ್ವಪಾಪ ವಿನಾಶನಂ । ನೀರಾಜನಂ ಕೃತಂ ವಿಪ್ರಾಃ ಯುಷ್ಮಾಭಿಸ್ತನ್ನಿರೀಕ್ಷತಾಂ ॥ ಕಶ್ಯಪಾದಿ ಸಪ್ತಋಷಿಭ್ಯೋ ನಮಃ ॥ ಮಹಾನೀರಾಜನ ದೀಪಂ ಸಮರ್ಪಯಾಮಿ ॥ ಮಹಾನೀರಾಜನವನ್ನು ಐದು ಬತ್ತಿಗಳಿಂದ ಮಾಡಬೇಕು.

ಮಂತ್ರ ಪುಷ್ಪ : ಏತೇ ಸಪ್ತರ್ಷಯಃ ಸರ್ವಭಕ್ತ್ಯಾ ಸಂಪೂಜಿತಾ ಮಯಾ । ಸರ್ವಪಾಪಂ ವ್ಯಪೋಹಂತು ಪುಷ್ಪಗೃಹ್ಣಂತು ಚೋತ್ತಮಮ್ । ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ । ಮಂತ್ರಪುಷ್ಪಾಂಜಲಿಂ ಸಮರ್ಪಯಾಮಿ ॥ ಎಲ್ಲ ಋಷಿಗಳಿಗೂ ಮಂತ್ರಾಕ್ಷತೆ ಹಾಕಬೇಕು.

ಪ್ರದಕ್ಷಿಣೆ : ಯಾನಿ ಕಾನಿ ಚ ಪಾಪಾನಿ ಜನ್ಮಾಂತರ ಕೃತಾನಿ ಚ । ತಾನಿ ತಾನಿ ವಿನಶ್ಯಂತಿ ಪ್ರದಕ್ಷಿಣ ಪದೇ ಪದೇ ॥ ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋನಮಃ । ಪ್ರದಕ್ಷಿಣಾಂ ಸಮರ್ಪಯಾಮಿ ॥

ನಮಸ್ಕಾರ : ನಮೋಽಸ್ತು ಋಷಿವರ್ಯೇಭ್ಯೋ ದೇವರ್ಷಿಭ್ಯೋ ನಮೋ ನಮಃ । ಸರ್ವ ಪಾಪ ಹರೇಭ್ಯಶ್ಚ ವೇದವಿದ್ಭ್ಯೋ ನಮೋ ನಮಃ । ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ । ನಮಸ್ಕಾರಾನ್ ಸಮರ್ಪಯಾಮಿ ॥

ಪ್ರಾರ್ಥನಾ : ಏತೇ ಸಪ್ತಋಷಯಸ್ಸರ್ವೇ ಭಕ್ತ್ಯಾ ಸಂಪೂಜಿತಾಮಯಾ । ಸರ್ವೇ ಪಾಪಾಃವ್ಯಪೋಹಂತು ಜ್ಞಾನತೋಽಜ್ಞಾನತಃ ಕೃತಮ್ ॥ ಅರುಂಧತೀ ಸಹಿತ ಕಶ್ಯಪಾದಿ ಋಷಿಭ್ಯೋ ನಮಃ ಪ್ರಾರ್ಥನಾಂ ಸಮರ್ಪಯಾಮಿ ॥ (ಎದ್ದು ನಿಂತು ಪ್ರಾರ್ಥನೆ ಸಲ್ಲಿಸಬೇಕು.)

ಅರ್ಘ್ಯ ಪ್ರದಾನಂ : 1) ಜನ್ಮ ಜನ್ಮಾರ್ಜಿತಂ ಪಾಪಂ ಪಾಪ ಬುದ್ಧ್ಯಾರ್ಜಿತಂ ಮಯಾ । ತತ್ಸರ್ವಂನಾಶಮಾಯಾಂತು ಗೃಹಾಣಾರ್ಘ್ಯಂ ನಮೋಽಸ್ತು ತೇ ॥ ಕಶ್ಯಪಾಯನಮಃ ಇದಮರ್ಘ್ಯಂ ಸಮರ್ಪಯಾಮಿ ॥ 2) ಸಪ್ತರ್ಷಯಃ ಶುಭಾಃ ಸರ್ವೇ ಸರ್ವೇಷಾಂ ಚ ಶುಭಪ್ರದಾಃ । ಸರ್ವಪಾಪಂ ವ್ಯಪೋಹಂತು ಗೃಹ್ಣಂತ್ವರ್ಘ್ಯಂ ನಮೋಽಸ್ತುತೇ ॥ ಅತ್ರಯೇ ನಮಃ ಇದಮರ್ಘ್ಯಂ ಸಮರ್ಪಯಾಮಿ ॥ 3) ಮೃಗನಾಭಿಸಮಾಯುಕ್ತಂ ಕದಲೀ ಸಂಭವಾನ್ವಿತಂ । ಗೃಹ್ಣಂತು ಮುನಯಃ ಸರ್ವೇ ಮದ್ದತ್ತಾರ್ಘ್ಯಂ ನಮೋಸ್ತು ವಃ ॥ ಭರದ್ವಾಜಾಯ ನಮಃ ಇದಮರ್ಘ್ಯಂ ಸಮರ್ಪಯಾಮಿ ॥ 4) ವಿದ್ವಾಂಸೋ ಮುನಯಶ್ಚೈವ ಬ್ರಾಹ್ಮಣಾಶ್ಚ ದ್ವಿಜೋತ್ತಮಾಃ । ಸರ್ವಲಕ್ಷಣ ಸಂಪೂರ್ಣಂ ಗೃಹ್ಣಂತ್ವರ್ಘ್ಯಂ ನಮೋಽಸ್ತುವಃ ॥ ವಿಶ್ವಾಮಿತ್ರಾಯ ನಮಃ ಇದಮರ್ಘ್ಯಂ ಸಮರ್ಪಯಾಮಿ ॥ 5) ಸರ್ವದೈವ ಸ್ತುವಂತೋಽತ್ರ ಋಷಯೋ ನಾರದಾದಯಃ । ಕಪಿಲಾದ್ಯಾತ್ತು ಗೃಹ್ಣಂತು ಮಮಾರ್ಘ್ಯಂ ಋಷಿಪುಂಗವಾಃ । ಗೌತಮಾಯ ನಮಃ

Rarest Archiver

ಇದಮರ್ಘ್ಯಂ ಸಮರ್ಪಯಾಮಿ ॥ 6) ಬ್ರಹ್ಮ ರ್ಷೀಣಾಂ ಚ ರುದ್ರಾಣಾಂ ಜ್ವಲದ್ ದ್ಯುತಿ ತಪೋಧನಾಃ । ಕ್ರೂರ ದಾಹಕ ಸಂತಾಪಾ ಗೃಹ್ಣಂತ್ವರ್ಘ್ಯಂ ದ್ವಿಜೇಶ್ವರಾಃ ॥ ಜಮದಗ್ನಯೇ ನಮಃ ಇದಮರ್ಘ್ಯಂ ಸಮರ್ಪಯಾಮಿ ॥ 7) ನಿತ್ಯಂ ತ್ವತ್ಪದ್ಮಸಂಸ್ಥಾನಿ ಯಾನಿ ಕರ್ಮಕೃತಾನಿ ವೈ । ಸಂಯೋಜಯ ತಪಶ್ರೇಷ್ಠ ಗೃಹಾಣವರದೋ ಭವ । ವಸಿಷ್ಠಾಯನಮಃ ಇದಮರ್ಘ್ಯಂ ಸಮರ್ಪಯಾಮಿ ॥ 8) ಸರ್ವಾಸಾಂ ಯೋಷಿತಾಂ ಸಾಧ್ವೀ ಸುಚಕ್ಷುಃ ಸತ್ವವಾಹಿನೀ । ಅವಸಥ್ಯಾದಿದಂಸೌರಿ ಗೃಹಾಣಾರ್ಘ್ಯಂ ಮುನೀಶ್ವರೀ । ಅರುಂಧತ್ಯೈ ನಮಃ ಇದಮರ್ಘ್ಯಂ ಸಮರ್ಪಯಾಮಿ ॥

ಪ್ರತಿಯೊಬ್ಬ ಋಷಿಗಳಿಗೆ ಕ್ರಮವಾಗಿ ಮೂರು ಸಲ ಮಂತ್ರಾಕ್ಷತೆ ದಕ್ಷಿಣೆ ಇಟ್ಟುಕೊಂಡು 24 ಸಲ ಅರ್ಘ್ಯ ಬಿಡಬೇಕು.

ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಪೂಜಾಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋವಂದೇ ತಮಚ್ಯುತಮ್ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಋಷೀಶ್ವರಾಃ । ಯತ್ಕೃತಂ ತು ಮಯಾಪೂಜಾ ಪರಿಪೂರ್ಣಂ ತದಸ್ತು ಮೇ ॥

ಅನೇಕ ಪ್ರತಿವಾರ್ಷಿಕ ವಿಹಿತ ಪೂಜನೇನ ಅರುಂಧತೀ ಸಹಿತ ಕಶ್ಯಪಾದಿ ಸಪ್ತರ್ಷಯಃ ಪ್ರೀಯತಾಂ ॥ ಪ್ರೀತೋಭವತು ॥ ಶ್ರೀಮಧ್ವೇಶಾರ್ಪಣಮಸ್ತು ॥

ವಾಯನದಾನ : ಆಚಮ್ಯ ಪ್ರಾಣಾನಾಯಮ್ಯ, ಅದ್ಯ ಪೂರ್ವೋಚ್ಚರಿತ ಏವಂಗುಣವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಆತ್ಮನಃ ಶ್ರುತಿಸ್ಮೃತಿ ಪುರಾಣೋಕ್ತ ಫಲ ಪ್ರಾಪ್ತ್ಯರ್ಥಂ, ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿ ದೇವತಾ ಪ್ರೀತ್ಯರ್ಥಂ ಬ್ರಾಹ್ಮಣಾಯ ವಾಯನದಾನಂ ಕರಿಷ್ಯೇ ॥ ತದಂಗತ್ವೇನ ಬ್ರಾಹ್ಮಣ ಪೂಜಾಂ ಕರಿಷ್ಯೇ –

ಬ್ರಾಹ್ಮಣಾಯ ಇದಮಾಸನಂ । ಸುಖಾಸನಂ । ಇದಂ ಪಾದ್ಯಂ ಸುಪಾದ್ಯಂ । ಇದಮರ್ಘ್ಯಂ । ಅಸ್ತ್ವರ್ಘ್ಯಂ । ಇದಮಾಚಮನೀಯಂ । ಅಸ್ತ್ವಾಚಮನೀಯಂ । ಗಂಧಾಃಪಾಂತು । ಸೌಮಂಗಲ್ಯಂ ಚಾಸ್ತು । ಅಕ್ಷತಾಃ ಪಾಂತು । ಆಯುಷ್ಯಮಸ್ತು । ಪುಷ್ಪಾಣಿ ಪಾಂತು । ಸೌಶ್ರೇಯಮಸ್ತು । ತಾಂಬೂಲಂ ಪಾತು । ಐಶ್ವರ್ಯಮಸ್ತು । ದಕ್ಷಿಣಾಃ ಪಾಂತು । ಬಹುದೇಯಂ ಚಾಸ್ತು । ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ।

ನಮೋಸ್ತ್ವನಂತಾಯ ಸಹಸ್ರಮೂರ್ತಯೇ ಸಹಸ್ರಪಾದಾಕ್ಷಿ ಶಿರೋರು ಬಾಹವೇ । ಸಹಸ್ರನಾಮ್ನೇ ಪುರುಷಾಯ ಶಾಶ್ವತೇ ಸಹಸ್ರಕೋಟಿ ಯುಗಧಾರಿಣೇ ನಮಃ । ಈ ಮಂತ್ರ ಹೇಳಿ ಬ್ರಾಹ್ಮಣರ ತಲೆಯ ಮೇಲೆ ಮಂತ್ರಾಕ್ಷತೆ ಹಾಕಬೇಕು.

ವಾಯನಂ ಫಲ ಸಂಯುಕ್ತಂ ಸಘೃತಂ ದಕ್ಷಿಣಾನ್ವಿತಂ । ದ್ವಿಜವರ್ಯಾಯ ದಾಸ್ಯಾಮಿ ವ್ರತ ಸಂಪೂರ್ತಿ ಹೇತವೇ ॥ ಭವಂತಃ ಪ್ರತಿ ಗೃಹ್ಣಂತು ಜ್ಯೋತಿರೂಪಾಸ್ತಪೋಧನಾಃ । ವಿಪ್ರಾಯ ವೇದವಿದುಷೇ ಶ್ರೋತ್ರಿಯಾಯ ಕುಟುಂಬಿನೇ । ನರಕೋತ್ತಾರಣಾರ್ಥಾಯ

Rarest Archiver

ಅಚ್ಯುತಃ ಪ್ರೀಯತಾಂ ಇತಿ । ಇದಂ ವಾಯನದಾನಂ ಸ ದಕ್ಷಿಣಾಂ ಸತಾಂಬೂಲಂ ..... ಶರ್ಮಣೇ ಬ್ರಾಹ್ಮಣಾಯ ತುಭ್ಯಮಹಂ ಸಂಪ್ರದದೇ ॥ ಪ್ರತಿಗೃಹ್ಯತಾಂ । ಪ್ರತಿಗೃಹ್ಣಾಮಿ ಎಂದು ಬ್ರಾಹ್ಮಣರು ಹೇಳಬೇಕು. ಅನುಕೂಲವಿದ್ದಲ್ಲಿ ಏಳು ಜನ ಬ್ರಾಹ್ಮಣರಿಗೆ, ಅನುಕೂಲವಿಲ್ಲದಿದ್ದರೆ ಒಬ್ಬ ಬ್ರಾಹ್ಮಣನಿಗಾದರೂ ವಾಯನದಾನ ಕೊಡಬೇಕು. ಅರುಂಧತೀಯ ಪ್ರೀತಿಗಾಗಿ ಮುತ್ತೈದೆಯರಿಗೆ ಮರದ ಬಾಗಿಣ ಕೊಡಬೇಕು.

ಉತ್ತರ ಪೂಜಾ : ಆಚಮ್ಯ, ಪ್ರಾಣಾನಾಯಮ್ಯ ಅದ್ಯ ಪೂರ್ವೋಚ್ಚರಿತ ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಶುಭಪುಣ್ಯತಿಥೌ ಮಮ ಆತ್ಮನಃ ಶ್ರುತಿ ಸ್ಮೃತಿ ಪುರಾಣೋಕ್ತ ಫಲಪ್ರಾಪ್ತ್ಯರ್ಥಂ ಉತ್ತರ ಪೂಜಾಂ ಕರಿಷ್ಯೇ ॥ (ಸಂಕಲ್ಪ ಮಾಡಬೇಕು)

ಅರುಂಧತೀ ಸಹಿತ ಕಶ್ಯಪಾದಿ ಸಪ್ತಋಷಿಭ್ಯೋ ನಮಃ । ವಿಲೇಪನಾರ್ಥೇ ಚಂದನಂ ಅಲಂಕಾರಾರ್ಥೇ ಅಕ್ಷತಾನ್ ಸಮರ್ಪಯಾಮಿ । ಪೂಜಾರ್ಥೇ ಪುಷ್ಪ, ಧೂಪ, ದೀಪ, ನೈವೇದ್ಯಂ ಸಮರ್ಪಯಾಮಿ । ಮುಖವಾಸನಾರ್ಥೇ ಪೂಗೀಫಲ ತಾಂಬೂಲಂ ಸಮರ್ಪಯಾಮಿ । ಸುವರ್ಣ ಪುಷ್ಪ ದಕ್ಷಿಣಾಂ ಸಮರ್ಪಯಾಮಿ । ನೀರಾಜನಂ ಸಮರ್ಪಯಾಮಿ । ಮಂತ್ರಪುಷ್ಪಂ ಸಮರ್ಪಯಾಮಿ । ಪ್ರದಕ್ಷಿಣ ನಮಸ್ಕಾರಾನ್ ಸಮರ್ಪಯಾಮಿ ॥ ಛತ್ರ, ಚಾಮರ, ಗೀತ, ನೃತ್ಯ, ವಾದ್ಯ, ಸಕಲ ರಾಜೋಪಚಾರಾರ್ಥೇ ಅಕ್ಷತಾನ್ ಸಮರ್ಪಯಾಮಿ।

ಅನೇನ ಉತ್ತರ ಪೂಜನೇನ ಶ್ರೀ ಅರುಂಧತೀ ಸಹಿತ ಕಶ್ಯಪಾದಿ ಸಪ್ತರ್ಷಯಃ ಪ್ರೀಯಂತಾಂ ॥ ಎಂದು ಹೇಳಿ ಮಂತ್ರಾಕ್ಷತೆ ನೀರು ಬಿಡಬೇಕು.

ಯಾಂತು ದೇವಗಣಾಃ ಸರ್ವೇ ಪೂಜಾಮಾದಾಯ ಪಾರ್ಥಿವೀಂ । ಇಷ್ಟಕಾಮ್ಯಾರ್ಥ ಸಿದ್ಧ್ಯರ್ಥಂ ಪುನರಾಗಮನಾಯ ಚ । ಆವಾಹಿತ ಋಷೀನ್ ವಿಸರ್ಜಯಾಮಿ । ಎಂದು ಹೇಳಿ ಎಲ್ಲ ಋಷಿಗಳಿಗೂ ಮಂತ್ರಾಕ್ಷತೆ ಹಾಕಬೇಕು. (ನಂತರ ಶ್ರೀ ಋಷಿಪಂಚಮೀ ಕಥಾ ಶ್ರವಣ ಮಾಡಬೇಕು.)

॥ ಶ್ರೀಕೃಷ್ಣಾರ್ಪಣಮಸ್ತು ॥

Rarest Archiver

॥ ಶ್ರೀಃ ॥

ಶ್ರೀ ಭವಿಷ್ಯೋತ್ತರ ಪುರಾಣೇ ಋಷಿಪಂಚಮೀ ಕಥಾ

ಯುಧಿಷ್ಠಿರ ಉವಾಚ–

ಶ್ರುತಾನಿ ದೇವ ದೇವೇಶ ವ್ರತಾನಿ ಸುಬಹೂನಿ ಚ ।
ಸಾಂಪ್ರತಂ ತು ಅನ್ಯದಾಚಕ್ಷ್ವ ವ್ರತಂ ಪಾಪ ಪ್ರಣಾಶನಂ ॥

ಶ್ರೀಕೃಷ್ಣ ಉವಾಚ–

ಅಥಾನ್ಯದಪಿ ರಾಜೇಂದ್ರ ಪಂಚಮೀ ಋಷಿ ಸಂಜ್ಞಿಕಾಂ ।
ಪ್ರವಕ್ಷ್ಯಾಮಿ ಚ ಯಾಂ ಕೃತ್ವಾ ನಾರೀ ಪಾಪಾತ್ ಪ್ರಮುಚ್ಯತೇ ॥

ಧರ್ಮರಾಜನು ಶ್ರೀಕೃಷ್ಣನನ್ನು ಕುರಿತು ಹೇಳುತ್ತಾನೆ– ಶ್ರೀಕೃಷ್ಣನೇ ! ನಿನ್ನಿಂದ ಅನೇಕ ವ್ರತಗಳನ್ನು ಕೇಳಿದೆನು. ಈಗ ಎಲ್ಲಾ ಪಾಪಗಳನ್ನು ನಾಶ ಮಾಡುವಂಥಾ ಇನ್ನೊಂದು ವ್ರತವನ್ನು ಹೇಳು.

ಶ್ರೀಕೃಷ್ಣನು ಹೇಳುವನು– ಧರ್ಮರಾಜ ! ಹೆಣ್ಣು ಮಕ್ಕಳು ಯಾವ ವ್ರತವನ್ನು ಮಾಡುವುದರಿಂದ ಪಾಪದಿಂದ ಮುಕ್ತರಾಗುವರೋ ಅಂತಹ "ಋಷಿಪಂಚಮೀ" ಎಂಬ ವ್ರತವಿದೆ ಅದನ್ನು ಹೇಳುವೆನು.

ಸ್ತ್ರೀಯರು ರಜಸ್ವಲೆಯರಾದಾಗ ತನಗೆ ತಿಳಿದೋ, ತಿಳಿಯದೆಯೋ ತನ್ನ ಮನೆ ಕೆಲಸದ ಕಾರಣಕ್ಕಾಗಿ ಪಾತ್ರೆ ಮುಂತಾದವುಗಳನ್ನು ಮುಟ್ಟುವಳೋ, ಆ ಮಹಾಪಾಪದಿಂದ ನರಕಕ್ಕೆ ಹೋಗುವವಳು. ಅದಕ್ಕಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕೂ ವರ್ಣದ ಜನರು ಅವಳನ್ನು ಮೂರುದಿನ ದೂರವಿಡಬೇಕು. ಅದಕ್ಕೆ ಕಾರಣ ಹೀಗಿದೆ.

ಹಿಂದೆ ಇಂದ್ರನು ಒಬ್ಬ ಬ್ರಾಹ್ಮಣನ ಮಗನಾದ ವೃತ್ರಾಸುರನನ್ನು ಸಂಹಾರ ಮಾಡಿದ್ದರಿಂದ ಇಂದ್ರನಿಗೆ ಬ್ರಹ್ಮಹತ್ಯೆ ದೋಷ ಬಂದಿತು. ಇದರಿಂದ ಕಾಂತಿಹೀನನಾದ ಇಂದ್ರನು ಮಹತ್ತರವಾದ ಪಾಪದಿಂದ ಬಿಡುಗಡೆ ಹೊಂದಲು ಬ್ರಹ್ಮದೇವರಿಗೆ ಮೊರೆಯಿಟ್ಟನು. ಬ್ರಹ್ಮದೇವರು ಇಂದ್ರನ ಸ್ಥಿತಿಯನ್ನು ನೋಡಿ ಕ್ಷಣ ಕಾಲ ಯೋಚಿಸಿ ನಂತರ ಸಂತೋಷದಿಂದ ಇಂದ್ರನು ಪಾಪದಿಂದ ಬಿಡುಗಡೆಯಾಗುವಂತೆ ಮಾಡಿದನು. ಬ್ರಹ್ಮಹತ್ಯೆಯನ್ನು ನಾಲ್ಕು ವಿಭಾಗ ಮಾಡಿ ನಾಲ್ಕು ಸ್ಥಾನಗಳಲ್ಲಿಟ್ಟನು. ಮೊದಲ ಭಾಗವನ್ನು ಬೆಂಕಿಯ ಮೊದಲಿನ ಜ್ವಾಲೆಯಲ್ಲಿ, ಎರಡನೆಯ ಭಾಗವನ್ನು ಮೊದಲು ಬಂದ

Rarest Archiver

ನೀರಿನಲ್ಲಿ, ಮೂರನೆಯ ಭಾಗವನ್ನು ಪರ್ವತದ ಶಿಖರ ಹಾಗೂ ಮರಗಿಡಗಳಲ್ಲಿ, ಕೊನೆಯ ಭಾಗವನ್ನು ಹೆಣ್ಣುಮಕ್ಕಳ ರಜಸ್ಸಿನಲ್ಲಿ ಇಟ್ಟನು. ಆದ್ದರಿಂದ ರಜಸ್ವಲೆಯರಾದ ಹೆಣ್ಣುಮಕ್ಕಳನ್ನು ಪ್ರಯತ್ನ ಪೂರ್ವಕವಾಗಿ ಬ್ರಹ್ಮದೇವರ ಆಜ್ಞೆಯಂತೆ ನಾಲ್ಕು ವರ್ಣದವರೂ ದೂರ ಇಡಬೇಕು. ಮುಟ್ಟಾದ ಸ್ತ್ರೀಯು ಮೊದಲದಿನ ಹೊಲೆಯರಂತೆ, ಎರಡನೆಯದಿನ ಬ್ರಹ್ಮಘಾತಿನಿಯಂತೆ, ಮೂರನೆಯದಿನ ರಜಕ (ಅಗಸರ)ರಂತೆ ಅಪವಿತ್ರಳಿದ್ದು ನಾಲ್ಕನೆಯದಿನ ಗಂಡನ ಸೇವೆಗೆ ಮಾತ್ರ ಶುದ್ಧಳು ಹೊರತು, ದೇವಕಾರ್ಯ, ಪಿತೃಕಾರ್ಯಗಳಿಗೆ ಐದನೆಯದಿನವೇ ಶುದ್ಧಳಾಗುವಳು. ಆದ್ದರಿಂದ ಮುಟ್ಟಾದ ದಿನಗಳಲ್ಲಿ ತಿಳಿದೋ, ತಿಳಿಯದೆಯೋ ಮುಟ್ಟಿ ಮನೆಗೆಲಸ ಮಾಡಿದ ಪಾಪವನ್ನು ಹೋಗಲಾಡಿಸಿಕೊಳ್ಳಲು ಈ "ಋಷಿಪಂಚಮೀ" ವ್ರತವನ್ನು ಮಾಡಬೇಕು. ಈ ವ್ರತವು ಎಲ್ಲ ಪಾಪಗಳನ್ನು ನಾಶಪಡಿಸುತ್ತದೆ. ಕಾರಣ ನಾಲ್ಕೂ ವರ್ಣದ ಸ್ತ್ರೀಯರು ಅವಶ್ಯವಾಗಿ ಮುಟ್ಟುನಿಂತ ಮೇಲೆ ಮಾಡಬೇಕು. ಈ ವಿಷಯವಾಗಿ ಶ್ರೀಕೃಷ್ಣನು ಪೂರ್ವಕಾಲದಲ್ಲಿ ನಡೆದ ಒಂದು ಕಥೆಯನ್ನು ಹೇಳುವನು–

ಹಿಂದೆ ವಿದರ್ಭದೇಶದಲ್ಲಿ ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಣುವ "ಸೇನಜಿತ್" ಎಂಬ ರಾಜನಿದ್ದನು. ಅವನ ರಾಜ್ಯದಲ್ಲಿ ವೇದ ವೇದಾಂಗಗಳನ್ನು ತಿಳಿದವನು, ಪ್ರಾಣಿದಯೆಯುಳ್ಳ 'ಸುಮಿತ್ರ'ನೆಂಬ ಬ್ರಾಹ್ಮಣನು ಒಕ್ಕಲುತನದಿಂದ ತನ್ನ ಜೀವನವನ್ನು ನಡೆಸುತ್ತಿದ್ದನು. ಅವನಿಗೆ ಸಾಧ್ವಿ ಶಿಖಾಮಣಿಯಾದ ಜಯಶ್ರೀ ಎಂಬ ಅನುರೂಪಳಾದ ಹೆಂಡತಿ ಇದ್ದಳು. ಇವರ ಮನೆಯಲ್ಲಿ ಕೆಲಸದವರು, ಸ್ನೇಹಿತರು, ನೆಂಟರು, ಇಷ್ಟರು ಎಲ್ಲರೂ ಕೂಡಿಯೇ ವಾಸಿಸುತ್ತಿದ್ದರು. ಎಲ್ಲರ ಹೊಟ್ಟೆ ತುಂಬುವದು ಹೇಗೆಂಬ ಚಿಂತೆಯಿಂದ ಮಳೆಗಾಲದಲ್ಲಿ ಮನೆಕೆಲಸ ಮುಗಿದ ಮೇಲೆ ಹೊಲಕ್ಕೆ ಹೋಗಿ ಅಲ್ಲಿ ಮನಸ್ಸುಗೊಟ್ಟು ಹೊಲದ ಕೆಲಸವನ್ನು ಜಯಶ್ರೀಯು ಮಾಡುತ್ತಿದ್ದಳು. ಹೀಗಿರಲು ಒಮ್ಮೆ ಅವಳು ಮುಟ್ಟಾದಳು, ಈ ಕಾಲದಲ್ಲಿ ಮನೆಯ ಪಾತ್ರೆ ಪಡಗುಗಳನ್ನು ಮುಟ್ಟಿ ಕೆಲಸ ಮಾಡಿದಳು. ಮುಂದೆ ಕೆಲಕಾಲ ಕಳೆದ ಮೇಲೆ ಅವಳು ಮರಣ ಹೊಂದಿದಳು. ಆಕೆಯ ಗಂಡನೂ ಸ್ವಲ್ಪು ದಿನಗಳ ನಂತರ ಮರಣ ಹೊಂದಿದನು. ಹೀಗೆ ಅವರಿಬ್ಬರೂ ವಿಧಿವಶರಾದ ಮೇಲೆ ಮುಂದೆ ಜಯಶ್ರೀಯು ನಾಯಿಯ ಜನ್ಮವನ್ನು, ಸುಮಿತ್ರನು ಎತ್ತಿನ ಜನ್ಮವನ್ನು ಪಡೆದರು. ಹಿಂದಿನ ಜನ್ಮದಲ್ಲಿ ಇವರು ಸ್ವಂತ ಧರ್ಮಾಚರಣೆಯನ್ನು ಮಾಡಿದ್ದರಿಂದ ಪೂರ್ವಜನ್ಮದ ಸ್ಮರಣೆಯಿದ್ದು ಇಬ್ಬರೂ ತಮ್ಮ ಮಗನ ಮನೆಯಲ್ಲೇ ತಮ್ಮ ಹಿಂದಿನ ಕರ್ಮಗಳನ್ನು ನೆನೆಯುತ್ತ ನಾಯಿ, ಎತ್ತಿನ ಜನ್ಮವನ್ನು ಹೊಂದಿ ವಾಸವಾಗಿದ್ದರು. ಮಗನಾದ ಸುಮತಿಯು ಗುರುಸೇವೆ, ಅತಿಥಿ, ದೇವತಾ ಸೇವೆಗಳನ್ನು ಭಕ್ತಿಯಿಂದ ಮಾಡುತ್ತಿದ್ದನು. ಹೀಗಿರಲು ಆತನ ತಂದೆಯ ಶ್ರಾದ್ಧ ಬರಲು ಸುಮತಿಯು ತನ್ನ ಹೆಂಡತಿಯಾದ ಚಂದ್ರವತಿಗೆ ಹೀಗೆ ಹೇಳಿದನು. "ಈ ದಿನ ನನ್ನ ತಂದೆಯ ಶ್ರಾದ್ಧವಿದೆ. ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ನೀನು ಅಡಿಗೆಯನ್ನು ಮಾಡೆಂದು ಹೇಳಲು"

Rarest Archiver

ಆಕೆಯು ಗಂಡನ ಆಜ್ಞೆಯಂತೆ ಅಡಿಗೆ ಮಾಡುತ್ತ ಪಾಯಸದ ಪಾತ್ರೆಯನ್ನು ಒಲೆಯ ಮೇಲೆ ಇಟ್ಟಿರಲು ಅದರಲ್ಲಿ ಹಾವು ತನ್ನ ವಿಷವನ್ನು ಬಿಟ್ಟಿತು. ಇದನ್ನು ಆ ನಾಯಿಯು ನೋಡಿ "ಈ ಪಾಯಸವನ್ನು ಬ್ರಾಹ್ಮಣರುತಿನ್ನಲು ವಿಷವೇರಿ ಸಾಯುವರು ನನ್ನ ಮಗನಿಗೆ ಬ್ರಹ್ಮಹತ್ಯೆ ದೋಷ ಬರುತ್ತದೆ" ಎಂದು ವಿಚಾರಿಸಿ, ಮಹತ್ತರವಾದ ಬ್ರಹ್ಮಹತ್ಯಾ ದೋಷಕ್ಕೆ ಹೆದರಿ ತಾನು ಹೋಗಿ ಅಡಿಗೆಯನ್ನು ಮುಟ್ಟಿತು. ಇದನ್ನು ಕಂಡ ಚಂದ್ರವತಿಯು ಕೋಪದಿಂದ ಆ ನಾಯಿಯನ್ನು ಉರಿಯುವ ಕಟ್ಟಿಗೆಯಿಂದ ಹೊಡೆದು, ಅಪವಿತ್ರವಾದ ಪಾತ್ರೆಗಳನ್ನು ತೊಳೆದು, ತಾನು ಸ್ನಾನಮಾಡಿ ಶುದ್ಧಳಾಗಿ ಮತ್ತೆ ಅಡಿಗೆ ಮಾಡಿದಳು. ಸುಮತಿ ಬ್ರಾಹ್ಮಣನು ವಿಧಿಪೂರ್ವಕ ಶ್ರಾದ್ಧವನ್ನು ಮಾಡಿ ಬ್ರಾಹ್ಮಣರ ಊಟವಾದ ನಂತರ ಪತ್ನಿಯು ಅವರ ಎಂಜಲನ್ನು ಹೊರಗೆ ಹಾಕದೇ ಒಂದು ತಗ್ಗಿನಲ್ಲಿ ಹಾಕಿ ಮುಚ್ಚಿದಳು. ಇದರಿಂದ ನಾಯಿಗೆ ಉಪವಾಸವಾಗಿ, ಆ ನಾಯಿಯು ರಾತ್ರಿ ವೇಳೆಯಲ್ಲಿ ತನ್ನ ಹಿಂದಿನ ಪತಿಯಾದ ಎತ್ತಿನ ಹತ್ತಿರ ಹೋಗಿ ನಡೆದ ವೃತ್ತಾಂತವನ್ನು ವಿವರಿಸಿ ಹೇಳಿತು. ಆಗ ಎತ್ತು ಬಹಳ ದುಃಖದಿಂದ ತನ್ನ ಕಥೆಯನ್ನು ಹೇಳಿಕೊಂಡಿತು. "ನಾನು ದಿನವೂ ಭಾರವನ್ನು ಹೊರುತ್ತೇನೆ. ನನ್ನ ಮಗನು ನನ್ನ ಮುಖಕ್ಕೆ ಜಾಳಿಗೆಯನ್ನು ಹಾಕಿ ಮುಖವನ್ನು ಕಟ್ಟಿ ಬಹಳವಾಗಿ ಹೊಡೆದನು. ನಾನೂ ಹಸಿವೆಯಿಂದ ಇರುವೆ. ನನ್ನ ಮಗನು ಇಷ್ಟು ಭಕ್ತಿಯಿಂದ ಶ್ರಾದ್ಧಮಾಡಿದರೂ ಅದು ನಮಗೆ ಸುಖಕ್ಕೆ ಕಾರಣವಾಗಲಿಲ್ಲವಾದ್ದರಿಂದ ಅದು ವ್ಯರ್ಥವೇ ಸರಿ". ಹೀಗೆ ತಮ್ಮೊಳಗೆ ಮಾತಾಡಿಕೊಳ್ಳುತ್ತಿರುವುದನ್ನು ಕೇಳಿದ ಸುಮತಿಯು ಇವರು ನನ್ನ ತಂದೆ ತಾಯಿಗಳೆಂದು ತಿಳಿದು ಆ ನಡುರಾತ್ರಿಯಲ್ಲಿ ಅವರಿಗೆ ಹೊಟ್ಟೆ ತುಂಬ ಆಹಾರಕೊಟ್ಟು, ಇವರ ನೀಚ ಜನ್ಮ ನಿವೃತ್ತಿಗಾಗಿ ಚಿಂತಿಸಿದನು. ಬೆಳಗಾಗುತ್ತಲೇ ಸುಮತಿಯು ಕಾಡಿಗೆ ಹೋಗಿ ಅಲ್ಲಿ ಜ್ಞಾನ ವೃದ್ಧರಾದ ಋಷಿಗಳನ್ನು ಕಂಡು ನಮಿಸಿ "ಋಷಿಗಳೇ ! ನನ್ನ ಸದಾಚಾರಿಗಳಾಗಿದ್ದ ತಂದೆ ತಾಯಿಗಳು ಎತ್ತಿನ ಜನ್ಮ, ನಾಯಿಯ ಜನ್ಮ ಪಡೆದಿರುವ ಕಾರಣವನ್ನು ತಿಳಿಸಿರಿ" ಎಂದು ಬೇಡಿಕೊಂಡನು. ಆಗ ಸರ್ವತಪಾ ಎಂಬ ಸರ್ವಜ್ಞರಾದ ಋಷಿಗಳು ಹೇಳಿದರು. ಸುಮತಿಯೇ ! ನಿನ್ನ ತಾಯಿ ಹಿಂದಿನ ಜನ್ಮದಲ್ಲಿ ಮುಟ್ಟಾಗಿದ್ದುದು ತಿಳಿದೂ ಮೂರ್ಖತನದಿಂದ ಮನೆಯಲ್ಲಿನ ಪಾತ್ರೆ-ಪಡಗುಗಳನ್ನು ಮುಟ್ಟಿ ಮನೆಕೆಲಸ ಮಾಡಿದಳು. ಈ ಮಹತ್ತಾದ ಪಾಪದಿಂದ ಅವಳು ನಾಯಿಯಾಗಿ ಹುಟ್ಟಿದಳು. ನಿನ್ನ ತಾಯಿಯ ದೋಷದಿಂದ ನಿನ್ನ ತಂದೆಗೆ ಎತ್ತಿನ ಜನ್ಮ ಉಂಟಾಯಿತು. ಇವರಿಬ್ಬರ ನೀಚ ಜನ್ಮ ಕಳೆಯಲು ನೀನು ಋಷಿಪಂಚಮೀ ವ್ರತವನ್ನು ಮಾಡಿ ಸಪ್ತರ್ಷಿಗಳನ್ನು ಪೂಜಿಸಿ ಏಳು ವರ್ಷಗಳ ವರೆಗೆ ವ್ರತವನ್ನು ಮಾಡಿ ಹಣದ ಅನುಕೂಲತೆಯನ್ನು ನೋಡಿಕೊಂಡು ಈ ವ್ರತದ ಉದ್ಯಾಪನೆಯನ್ನು ಮಾಡಬೇಕು. ವ್ರತ ಮಾಡುವವರು ಉಪವಾಸವಿರಬೇಕು. ವ್ರತ ಮಾಡಿ ಮುಗಿಸಿರುವವರು, ನವಣೆ, ಗೋದಿ, ಮತ್ತು ಹಣ್ಣು ಹಂಪಲನ್ನು ಆಹಾರವಾಗಿ ಸ್ವೀಕರಿಸಬೇಕು. ಭಾದ್ರಪದ ಶುಕ್ಲ ಪಂಚಮೀ ದಿನ ಮಧ್ಯಾಹ್ನ ನದೀ, ಪುಷ್ಕರಣೀ, ಜಲಾಶಯಗಳಿಗೆ ಹೋಗಿ ನಿರ್ಮಲವಾದ ನೀರಿನಲ್ಲಿ ಸ್ನಾನಮಾಡಬೇಕು.

Rarest Archiver

ಮೊದಲು ಉತ್ತರಾಣಿ ಕಡ್ಡಿಗಳಿಂದ ಹಲ್ಲುಗಳನ್ನು ಉಜ್ಜಬೇಕು. ವನಸ್ಪತಿಗೆ ಆಯುಷ್ಯ, ಬಲ, ಯಶ, ವರ್ಚಸ್ಸು, ಪ್ರಜಾ, ಪಶು, ದ್ರವ್ಯ ಇವುಗಳನ್ನು, ವೇದ, ಶಾಸ್ತ್ರಗಳಲ್ಲಿ ನಿಶ್ಚಯ ಜ್ಞಾನವನ್ನು ಕೊಡಬೇಕೆಂದು ಪ್ರಾರ್ಥಿಸಬೇಕು. ಹಲ್ಲುಗಳನ್ನು ಶುದ್ಧ ಮಾಡಿಕೊಂಡು, ಮೃತ್ತಿಕಾ ಪ್ರಾರ್ಥನೆ ಮಾಡಿ ಮೃತ್ತಿಕಾ ಸ್ನಾನ, ನೆಲ್ಲಿಕಾಯಿಯಿಂದ ಕೂದಲು ಶುದ್ಧಮಾಡಿಕೊಂಡು, ಶುದ್ಧಸ್ನಾನಮಾಡಿ ಶುಭ್ರವಾದ ಬಿಳಿಬಟ್ಟೆಯನ್ನು ಉಟ್ಟು ನಿತ್ಯಕರ್ಮವನ್ನು ತೀರಿಸಿಕೊಂಡು ಏಕಚಿತ್ತದಿಂದ ಅರುಂಧತಿ ಸಹಿತರಾದ ಪರಮ ಪೂಜ್ಯರಾದ ಸಪ್ತರ್ಷಿಗಳನ್ನು ಪೂಜಿಸಬೇಕು.

ಕಶ್ಯಪೋಽತ್ರಿರ್ಭರದ್ವಾಜೋ ವಿಶ್ವಾಮಿತ್ರೋಽಥಗೌತಮಃ ।
ಜಮದಗ್ನಿರ್ವಸಿಷ್ಠಶ್ಚ ಸಾಧ್ವೀ ಚೈವಾಪ್ಯರುಂಧತೀ ।
ಮಂತ್ರೇಣಾನೇನ ಸಪ್ತರ್ಷೀನ್ ಪೂಜಯೇತ್ ಸುಸಮಾಹಿತಃ ।
ವ್ರತೇನ ಋಷಿಪಂಚಮ್ಯಾಃ ಕೃತೇನೈವ ದ್ವಿಜೋತ್ತಮ ।
ಋತು ಸಂಪರ್ಕಜೋ ದೋಷಃ ಕ್ಷಯಂ ಯಾಂತಿ ನ ಸಂಶಯಃ ॥

ಈ ರೀತಿ ಸಪ್ತರ್ಷಿಗಳನ್ನು ಪೂಜೆ ಮಾಡುವುದರಿಂದ ಋತುಸಂಪರ್ಕದೋಷವು ಬೇರು ಸಹಿತ ನಾಶವಾಗುವದು.

ಸುಮತಿಯು ಸರ್ವತಪಾ ಋಷಿಗಳು ಹೇಳಿದ ಮಾತುಗಳನ್ನು ಕೇಳಿ ಈ ವ್ರತವನ್ನು ಹಿಂದೆ ಯಾರು ಮಾಡಿದ್ದರು ? ಅದರ ವಿಧಾನ ಹೇಗೆ ? ಎಂದು ಕೇಳಲು ಆ ಋಷಿಗಳು ಬ್ರಹ್ಮ ಹಾಗೂ ಸಿತಾಶ್ವರ ಸಂವಾದ ರೂಪ ಕಥೆಯನ್ನು ಹೇಳುವರು–

ಬ್ರಹ್ಮದೇವರು ಸಿತಾಶ್ವನನ್ನು ಕುರಿತು ಹೇಳುವರು. ಸಿತಾಶ್ವರಾಜನೇ ! ಎಲ್ಲ ವ್ರತಗಳಲ್ಲಿ ಶ್ರೇಷ್ಠ ಪಾಪ ಪರಿಹಾರಕವಾದುದು ಋಷಿಪಂಚಮೀ ವ್ರತವು. ಈ ವ್ರತವನ್ನು ಮಾಡುವುದರಿಂದ ನರಕದರ್ಶನವಿಲ್ಲ. ಈ ವಿಷಯದಲ್ಲಿ ಹಿಂದಿನ ಒಂದು ಇತಿಹಾಸವನ್ನು ಹೇಳುವೆನು ಕೇಳು–

ಹಿಂದೆ ವಿದರ್ಭ ದೇಶದಲ್ಲಿ ಉತ್ತಂಕ, ಸುಶೀಲಾ ಎಂಬ ಬ್ರಾಹ್ಮಣ ದಂಪತಿಗಳಿದ್ದರು. ಅವರಿಗೆ ಒಬ್ಬ ಮಗ ಮತ್ತು ಒಬ್ಬ ಮಗಳಿದ್ದಳು. ಮಗನಿಗೆ ಸಕಲ ಶಾಸ್ತ್ರಾಧ್ಯಯನ ಮಾಡಿಸಿದ್ದನು. ಮಗಳನ್ನು ಒಬ್ಬ ಕುಲೀನ ಬ್ರಾಹ್ಮಣನಿಗೆ ಕೊಟ್ಟು ವಿವಾಹ ಮಾಡಿದ್ದನು. ದುರ್ದೈವದಿಂದ ಮಗಳಿಗೆ ವೈಧವ್ಯ ಬಂದಿತು. ವಿಧವೆಯಾಗಿ ಅವಳು ತಂದೆಯ ಮನೆಯಲ್ಲಿ ಸೇವೆಮಾಡುತ್ತ ಇದ್ದಳು. ಉತ್ತಂಕನು ತನ್ನ ಮಗನನ್ನು ಮನೆಯಲ್ಲಿಟ್ಟು ತಾನು ತನ್ನ ಹೆಂಡತಿ ಮತ್ತು ಮಗಳ ಜೊತೆಗೆ ಗಂಗಾನದಿಯ ಹತ್ತಿರ ಕಾಡಿಗೆ ಬಂದು ಅಲ್ಲಿಯೇ ಶಿಷ್ಯರಿಗೆ ಪಾಠ ಹೇಳುತ್ತಿದ್ದನು. ಹೀಗಿರಲು ಒಂದು ದಿನ ತಂದೆಯ ಸೇವೆಯನ್ನು ಮಾಡಿ ಬಹಳ ದಣಿದ ಮಗಳು ರಾತ್ರಿ ಮಲಗಿದ್ದಾಗ ಅವಳ ದೇಹ ಕಾಣಿಸದೇ ಹುಳುರಾಶಿ ಕಂಡಿತು. ಇದನ್ನು ನೋಡಿದ ಶಿಷ್ಯರು ಆಕೆಯ ತಾಯಿಯ ಹತ್ತಿರ

Rarest Archiver

ಹೋಗಿ ಹೇಳಿದರು. ಈ ಮಾತನ್ನು ಕೇಳಿದ ತಾಯಿಯು ಕೂಡಲೇ ತನ್ನ ಮಗಳು ಮಲಗಿದ ಜಾಗೆಗೆ ಬಂದು ನೋಡಿ ಬಹಳ ವ್ಯಸನದಿಂದ ಎದೆಬಡಿದುಕೊಂಡು ಅಳುತ್ತ ಆ ದುಃಖವನ್ನು ಸಹಿಸದೇ ಮೂರ್ಛೆಗೊಂಡಳು. ಮತ್ತೆ ಎಚ್ಚರಗೊಂಡ ಮೇಲೆ ತನ್ನ ಹತ್ತಿರ ಎದ್ದು ಕುಳಿತ ಮಗಳನ್ನು ಸರಿಯಾಗಿ ಕೂಡಿಸಿ ಅವಳ ಕಣ್ಣಿಗೆ ನೀರನ್ನು ಹಚ್ಚಿ ಅವಳ ತಂದೆಯ ಹತ್ತಿರ ಕರೆದುಕೊಂಡು ಬಂದು "ಪತಿದೇವರೇ ! ನಿನ್ನ ಮಗಳು ಯಾವ ಪಾಪದಿಂದ ಮಧ್ಯರಾತ್ರಿ ಮಲಗಿದಾಗ ಹುಳುರಾಶಿಯಾದಳು ತಿಳಿಸಿರಿ" ಎಂದಳು.

ಉತ್ತಂಕನು ಜ್ಞಾನ ದೃಷ್ಟಿಯಿಂದ ತನ್ನ ಮಗಳ ಪೂರ್ವವೃತ್ತಾಂತವನ್ನು ತಿಳಿದು ಹೇಳಿದನು. ಇವಳು ತನ್ನ ಹಿಂದಿನ ಏಳನೇ ಜನ್ಮದಲ್ಲಿ ಒಬ್ಬ ಬ್ರಾಹ್ಮಣನ ಹೆಂಡತಿಯಾಗಿದ್ದಳು. ತಾನು ಮುಟ್ಟಾಗಿದ್ದಾಗ ಮನೆಯ ಕೆಲಸಗಳನ್ನು ಸ್ವತಃ ಮುಟ್ಟಿ ಮಾಡಿದ್ದರಿಂದ ಅವಳ ದೇಹ ಮಲಗಿದ್ದಾಗ ಹುಳುರಾಶಿಯಾಯಿತು. ಏಕೆಂದರೆ – ಮುಟ್ಟಾದವರು ಮೂರುದಿನ ಮನೆಕೆಲಸ, ಪಾತ್ರೆಗಳನ್ನು ಮುಟ್ಟಕೂಡದು. ಈ ಮಗಳು ಅದೇ ಜನ್ಮದಲ್ಲಿ ಸ್ನೇಹಿತೆಯರಿಂದ ಸೇರಿ ಋಷಿಪಂಚಮಿ ವ್ರತಕ್ಕೆ ಅವಮಾನ ಮಾಡಿದಳು. ಆದರೂ ವ್ರತ ನೋಡಿದ ಪುಣ್ಯದಿಂದ ಬ್ರಾಹ್ಮಣ ಜನ್ಮದಲ್ಲಿ ಹುಟ್ಟಿದ್ದು, ವ್ರತಕ್ಕೆ ಅವಮಾನ ಮಾಡಿದ್ದರಿಂದ ಈ ಜನ್ಮದಲ್ಲಿ ಹುಳುರಾಶಿಯಾದಳು. ಈ ಎಲ್ಲವನ್ನು ಕೇಳಿ ಸುಶೀಲೆಯು ಋಷಿಪಂಚಮಿ ವ್ರತವನ್ನು ವಿವರಿಸಬೇಕೆಂದು ಕೇಳಲು ಬ್ರಾಹ್ಮಣನು ಹೇಳತೊಡಗಿದನು –

ಈ ಋಷಿಪಂಚಮೀ ವ್ರತ ಮಾಡುವುದರಿಂದ ರಜಸ್ಸಂಪರ್ಕದೋಷ, ಆಧಿಭೌತಿಕ, ಆಧಿ ದೈವಿಕ, ಆಧ್ಯಾತ್ಮಿಕ ದುಃಖಗಳಿಂದ ಮುಕ್ತರಾಗುವರು. ಅವರಿಗೆ ಎಲ್ಲ ರೀತಿ ಮಂಗಳ ಉಂಟಾಗುವದು. ಐಶ್ವರ್ಯವೃದ್ಧಿಯಾಗಿ ಆಪತ್ತುಗಳು ನಾಶವಾಗುವವು. ಪಂಚಮೀದಿನ ಯಥಾವಿಧಿ ಸಂಕಲ್ಪಪೂರ್ವಕ ಸ್ನಾನಮಾಡಿ ಶುಭ್ರ ವಸ್ತ್ರವನ್ನುಟ್ಟು ನಿತ್ಯಕರ್ಮ ಮಾಡಿ, ಋಷಿಗಳನ್ನು ಸ್ಥಾಪನೆ ಮಾಡಿ ಅವರಿಗೆ ಪಂಚಾಮೃತ, ಚಂದನ, ಅಗರು, ಕರ್ಪೂರ, ಸುಗಂಧ ಪುಷ್ಪ ಧೂಪ, ದೀಪ, ಯಜ್ಞೋಪವೀತ ಫಲಸಮರ್ಪಣ ಮಾಡಿ ಅರ್ಘ್ಯ ಬಿಡಬೇಕು. ನಂತರ ಮರುದಿನ ಬ್ರಾಹ್ಮಣ ಸುವಾಸಿನೀ ಭೋಜನ ಮಾಡಿಸಿ, ತನ್ನ ಶಕ್ತಿಗೆ ಅನುಗುಣವಾಗಿ ವಸ್ತ್ರ, ದಕ್ಷಿಣೆ ಕೊಡಬೇಕು.

ವ್ರತಮಾಡುವ ಹೆಣ್ಣು ಮಗಳು ಗಂಡನ ಅನುಮತಿಯನ್ನು ಪಡೆದು ಆಚರಿಸಬೇಕು. ವಿಧವೆಯು ಬ್ರಾಹ್ಮಣರ ಅನುಮತಿ ಕೇಳಿ ತನ್ನ ಸ್ವಂತ ಪ್ರಯತ್ನದಿಂದ ಈ ವ್ರತ ಮಾಡಿ ಕಥೆಯನ್ನು ಕೇಳಿ ವ್ರತಸ್ಥರಾಗಿ ಆದಿನವನ್ನು ಕಳೆಯಬೇಕು.

ಸುಶೀಲೆಯು ಮಗಳ ಕಡೆಯಿಂದ ಈ ಋಷಿಪಂಚಮೀ ವ್ರತವನ್ನು ಭಕ್ತಿಪೂರ್ವಕ ಮಾಡಿಸಿದಳು. ಈ ವ್ರತ ಪ್ರಭಾವದಿಂದ ಅವಳು ಉತ್ತಮವಾದ ಗತಿಯನ್ನು ಹೊಂದಿದಳು.

Rarest Archiver

ಧರ್ಮರಾಜನೇ ! ಸುಮತಿಯು ಕೂಡಲೇ ಮನೆಗೆ ಹೋಗಿ ತನ್ನ ಹೆಂಡತಿಯಿಂದ ಕೂಡಿ ಭಕ್ತಿಯಿಂದ ಋಷಿಗಳ ಪೂಜೆಮಾಡಿ ತನಗೆ ಬಂದ ಪುಣ್ಯ ಫಲವನ್ನು ತನ್ನ ತಂದೆ-ತಾಯಿಗಳಿಗೆ ಧಾರೆಯೆರೆದು ಕೊಟ್ಟನು. ವ್ರತದ ಪ್ರಭಾವದಿಂದ ತಾಯಿಯ ನಾಯಿಜನ್ಮ ಹೋಗಿ ಸ್ವರ್ಗ ಸೇರಿದಳು. ತಂದೆಯು ಎಲ್ಲರಿಂದ ಸ್ತುತಿಸಿಕೊಂಡವನಾಗಿ ಸತ್ಯಲೋಕ ಸೇರಿದನು.

ಈ ಋಷಿಪಂಚಮೀ ವ್ರತದ ಪ್ರಭಾವದಿಂದ ಶರೀರ, ಮಾತು, ಮನಸ್ಸುಗಳಿಂದ ಎಸಗಿದ ಪಾಪಗಳು ನಾಶವಾಗುವವು. ಮನೆಯಲ್ಲಿ ಧನ, ಧಾನ್ಯ, ಸಂತತಿ ವೃದ್ಧಿಯಾಗುವದು.

ಏತತ್ತೇ ಕಥಿತಂ ರಾಜನ್ ವ್ರತಾನಾಂ ಉತ್ತಮಂ ವ್ರತಂ ।
ಸರ್ವ ಸಂಪತ್‌ಪ್ರದಂ ಚೈವ ನಾರೀಣಾಂ ಪಾಪನಾಶನಂ ॥
ಯೇ ಚ ಶೃಣ್ವಂತಿ ಸತತಂ ಯೇ ಪಠಂತಿ ಚ ಮಾನವಾಃ ।
ತೇ ಸರ್ವೇ ಪಾಪನಿರ್ಮುಕ್ತಾಃ ಯಾಸ್ಯಂತಿ ಚ ಪರಾಂಗತಿಂ ॥

ಧರ್ಮರಾಜನೇ ! ವ್ರತಗಳಲ್ಲಿ ಉತ್ತಮವಾದ ಈ ವ್ರತವು ನಿನಗೋಸ್ಕರ ಹೇಳಲ್ಪಟ್ಟಿತು. ಸ್ತ್ರೀಯರಿಗೆ ಪಾಪನಾಶಕವಾಗಿ ಎಲ್ಲ ಸಂಪತ್ತನ್ನು ಕೊಡುತ್ತದೆ. ಈ ಕಥೆಯನ್ನು ಯಾರು ಕೇಳುವರೋ, ಹೇಳುವರೋ ಅವರೆಲ್ಲರೂ ಪಾಪಗಳಿಂದ ಮುಕ್ತರಾಗಿ ಉತ್ತಮವಾದ ಗತಿಯನ್ನು ಹೊಂದುತ್ತಾರೆ.

॥ ಇತಿ ಶ್ರೀ ಭವಿಷ್ಯೋತ್ತರ ಪುರಾಣೇ ಕೃಷ್ಣಯುಧಿಷ್ಠಿರ ಸಂವಾದೇ ಋಷಿಪಂಚಮೀ ಪೂಜಾಕಥಾ ಸಂಪೂರ್ಣಾ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

Rarest Archiver

॥ ಶ್ರೀಃ ॥

ಶ್ರೀ ವಿಷ್ಣು ಪಂಚಕ ವ್ರತ ಪರಿಚಯ

ಪೂರ್ವ ಪುಣ್ಯವಿಶೇಷದ ಫಲವಾಗಿ ವೈಷ್ಣವ ಜನ್ಮ ಪಡೆದ ಪ್ರತಿಯೊಬ್ಬರೂ (ಪುರುಷರಾಗಲಿ, ಸ್ತ್ರೀಯರಾಗಲಿ) ತನ್ನ ಜೀವಮಾನದಲ್ಲಿ ಒಂದು ಸಲವಾದರೂ ಮಾಡಲೇಬೇಕಾದ ವ್ರತವಿದು. ಇದು ಕಾಮ್ಯವಾಗಿರದೇ ಮುಕ್ತಿಗೆ ಸಾಧನವಾದ ವ್ರತವೆನಿಸಿದೆ.

ವೈಷ್ಣವನಾಗಿ ಜನ್ಮತಾಳಿದ ಬ್ರಾಹ್ಮಣನು ಗಾಯತ್ರೀ ಮಂತ್ರವನ್ನು ಅತ್ಯವಶ್ಯವಾಗಿ ನಿತ್ಯ ಜಪಿಸುವಂತೆ, ಪ್ರತಿ ತಿಂಗಳೂ ಶ್ರೀ ವಿಷ್ಣು ಪ್ರೀತ್ಯರ್ಥವಾಗಿ ಶುಕ್ಲ ಹಾಗೂ ಕೃಷ್ಣಪಕ್ಷದ ಏಕಾದಶಿಗಳೆರಡನ್ನೂ ಮಾಡಿಯೇ ಮಾಡಬೇಕು. ಅದು ಕರ್ತವ್ಯವೇ ಆಗಿದೆ. ಕಾರಣ ಅದು ನಿತ್ಯವ್ರತವೆನಿಸಿದೆ. ಶುಕ್ಲ ಏಕಾದಶೀ ಮತ್ತು ಕೃಷ್ಣ ಏಕಾದಶೀ ಮರುದಿನ ಶುಕ್ಲ ದ್ವಾದಶಿ ಕೇಶವಾದಿ ದಾಮೋದರ ಪರ್ಯಂತ ಮತ್ತು ಕೃಷ್ಣದ್ವಾದಶಿ ಸಂಕರ್ಷಣಾದಿ ಶ್ರೀಕೃಷ್ಣ ಪರ್ಯಂತ ಅರ್ಘ್ಯ ಕೊಟ್ಟು ತೀರ್ಥ ತೆಗೆದುಕೊಳ್ಳಬೇಕು.

ಇವುಗಳಲ್ಲದೇ ಇನ್ನೂ ಮೂರು ಉಪವಾಸಗಳನ್ನು ಅಂದರೆ ಶ್ರವಣ ನಕ್ಷತ್ರದ ದಿನ, ಹುಣ್ಣಿಮೆ, ಮತ್ತು ಅಮಾವಾಸ್ಯೆ ದಿನಗಳಲ್ಲಿ ಮಾಡಿದ್ದಾದರೆ ಅದು "ವಿಷ್ಣು ಪಂಚಕ" ವೆನಿಸುತ್ತದೆ. ಪ್ರತಿತಿಂಗಳಲ್ಲಿಯೂ ಐದು ಉಪವಾಸಗಳನ್ನು ಮಾಡುತ್ತ ಶ್ರೀವಿಷ್ಣುವಿಗೆ ಸಮರ್ಪಣೆ ಮಾಡುವ ವ್ರತವೆಂದರ್ಥ. ಈ ರೀತಿ ಒಂದು ವರ್ಷಕಾಲ ಮಾಡಿ ಉದ್ಯಾಪನೆ ಮಾಡಬೇಕು.

ಶ್ರೀವಿಷ್ಣು ಪಂಚಕ ಉಪವಾಸಕ್ಕೆ ನಿಷಿದ್ಧ ದಿನಗಳು :

ಏಕಾದಶೀ ಉಪವಾಸಗಳು ಸರ್ವಥಾ ತಪ್ಪುವದಿಲ್ಲ. ಆದರೆ ಉಳಿದ ಮೂರು ಉಪವಾಸಗಳು ಕೆಲವು ವೇಳೆ ತಪ್ಪುವದುಂಟು.

1) ಶ್ರವಣ ನಕ್ಷತ್ರವು ಉತ್ತರಾಷಾಢ ನಕ್ಷತ್ರದಿಂದ ವಿದ್ಧವಾಗಿದ್ದರೆ ಅಥವಾ ಮಧ್ಯಾಹ್ನಕ್ಕಿಂತ ಹೆಚ್ಚು ಇಲ್ಲದಿದ್ದರೆ, ಅಥವಾ ಸೂರ್ಯೋದಯಕ್ಕೆ ಇಲ್ಲದಿದ್ದರೆ, ಅಥವಾ 59-33 ಪಳಕ್ಕಿಂತ ಹೆಚ್ಚು ಇದ್ದರೆ, ಅಥವಾ ಹಿಂದಿನ ದಿನ 60 ಘಳಿಗೆ ಇದ್ದು ಮರುದಿನ ಸ್ವಲ್ಪ ಉಳಿದಿದ್ದರೆ ಉಪವಾಸ ಮಾಡಬಾರದು.

2) ಪೂರ್ಣಿಮಾ (ಹುಣ್ಣಿಮೆ) ತಿಥಿಯು ಸೂರ್ಯೋದಯಕ್ಕೆ ಚತುರ್ದಶೀ ವಿದ್ಧವಾದರೆ, ಅಥವಾ ಸೂರ್ಯೋದಯದನಂತರ ಮೂರು ಗಂಟೆ ಕಾಲ (7-30 ಘಳಿಗೆ) ಒಳಗಾಗಿ ಮುಗಿದು ಹೋಗುವಂತಿದ್ದರೆ ಅಥವಾ 56-33 ಪಳಗಳ ಮೇಲೆ ಇದ್ದರೆ ಅಥವಾ ಅರವತ್ತು ಘಳಿಗೆ ಇದ್ದು ಮರುದಿನ ಸ್ವಲ್ಪ ಉಳಿದಿದ್ದರೆ ಉಪವಾಸ ಮಾಡಬಾರದು.

Rarest Archiver

3) ಹೀಗೆಯೇ ಅಮಾವಾಸ್ಯೆ ಸೂರ್ಯೋದಯಕ್ಕೆ ಚತುರ್ದಶೀ ವಿದ್ಧವಾದರೆ ಉಪವಾಸ ಮಾಡಬಾರದು.

ಅಲ್ಲದೇ ಶ್ರವಣ ನಕ್ಷತ್ರದಿಂದ ಕೂಡಿದ ದಶಮೀ, ಸಾಧನಿ ದ್ವಾದಶಿ, ಪಿತೃಯಜ್ಞದ ದಿನ, ಶಿವರಾತ್ರಿ, ಹಾಗೂ ಸುಬ್ರಹ್ಮಣ್ಯ ಷಷ್ಠೀ* (ಚಂಪಾಷಷ್ಠೀ) ದಿನಗಳಲ್ಲಿ ಈ ಉಪವಾಸ ಆಚರಣೆ ನಿಷಿದ್ಧವಾಗಿದೆ.

ಶ್ರೀಮದುತ್ತರಾದಿಮಠದ ಪಂಚಾಂಗದಲ್ಲಿ ಈ ಉಪವಾಸ ನಿಷಿದ್ಧ ದಿನವನ್ನು "ವಿಷ್ಣುಪಂಚಕ ವ್ರತಾಭಾವಃ" ಎಂಬುದಾಗಿ ಕೊಟ್ಟಿರುತ್ತಾರೆ. ಕಾರಣ ಯಾರೂ ಗೊಂದಲಕ್ಕೆ ಬೀಳುವ ಅವಕಾಶವಿಲ್ಲ.

ಇದರಿಂದ ಈ ಮೂರು ಉಪವಾಸಗಳು ಏಕಾದಶಿಯಂತೆ ಅಲ್ಲವೆಂಬುದು ಸ್ಪಷ್ಟವಾಗುತ್ತದೆ. ಕಾರಣ ಈ ಉಪವಾಸ ಮಾಡಿದ ದಿನದಂದು ಗಂಧಾಕ್ಷತೆ ಧಾರಣೆ, ಮೂರುಸಲ ಗಂಧೋದಕ ತೀರ್ಥ ಪ್ರಾಶನ ಮಾಡುವದು ಸಂಪ್ರದಾಯವಾಗಿ ಬಂದಿದೆ.

ಅಶೌಚದಲ್ಲಿ ಮತ್ತು ಅನಾರೋಗ್ಯವಿದ್ದಾಗ ಈ ಉಪವಾಸಗಳನ್ನು (ಏಕಾದಶಿಯನ್ನು ಹೊರತುಪಡಿಸಿ) ಮಾಡಬಾರದೆಂದು ಶಾಸ್ತ್ರವಿದೆ. ಈ ಕಾರಣದಿಂದ ಬಿಟ್ಟುಹೋದ ಉಪವಾಸಗಳನ್ನು ಮುಂದಿನ ವರ್ಷದಲ್ಲಿ ಆಯಾ ದಿನಗಳಲ್ಲಿ ಮಾಡಿ ಮುಗಿಸುವದುಂಟು.

ಶ್ರೀವಿಷ್ಣುಪಂಚಕ ವ್ರತ ಪ್ರಾರಂಭ ಎಂದು ? :

ಈ ವ್ರತವನ್ನು ಸಾಮಾನ್ಯವಾಗಿ ಭಾದ್ರಪದ ಮಾಸದ ಶುಕ್ಲಪಕ್ಷದ ದ್ವಾದಶೀ ದಿನವಾಗಲಿ ಅಥವಾ ಮಾರ್ಗಶಿರ ಮಾಸದ ಶುಕ್ಲಪಕ್ಷದ ಪಂಚಮೀ ದಿನದಲ್ಲಾಗಲೀ ಪ್ರಾರಂಭ ಮಾಡಬಹುದಾದರೂ ಆ ದಿನಗಳಲ್ಲಿ ಶ್ರವಣಾನಕ್ಷತ್ರ ಇರಬೇಕು. ಸ್ಪಷ್ಟವಾಗಿ ಗಮನಿಸಬೇಕಾದ ಅಂಶವೆಂದರೆ, ಪ್ರಾರಂಭಮಾಡುವ ಮಾಸದಲ್ಲಿ ಮೇಲಿನ ಐದು ಉಪವಾಸಗಳು ಕಡ್ಡಾಯವಾಗಿ ಇರಲೇಬೇಕು.

ಈ ಉಪವಾಸ ಮಾಡಿದ ಮರುದಿನ ದಂಪತಿಭೋಜನವನ್ನು ಮಾಡಿಸಬೇಕು. ಉಪವಾಸ ದಿನದಂದು ಶ್ರೀಹರಿಸ್ಮರಣ ಪೂರ್ವಕ ಸಚ್ಛಾಸ್ತ್ರಶ್ರವಣ, (ಪಠಣ) ಶ್ರೀಮದ್‌ಭಾಗವತಾದಿ ಪುರಾಣ ಶ್ರವಣಗಳು ಅವಶ್ಯಕ.

ಉಪವಾಸ ಮಾಡಿ ಪಾರಣೆ ದಿನಗಳಲ್ಲಿ ಆಯಾ ದಿನಕ್ಕೆ ವಿಹಿತವಾದ ಆಯಾ ದಿನದ ದೇವತೆಗಳ ಹೆಸರುಗಳನ್ನು ಹೇಳುತ್ತ ತರ್ಪಣ ಕೊಡಬೇಕು. ನಂತರ ತೀರ್ಥ ತೆಗೆದುಕೊಳ್ಳಬೇಕು. ಇಲ್ಲಿ ದೇವತೆಗಳ ಹೆಸರುಗಳನ್ನು ಕೊಡಲಾಗಿದೆ.

---

* ಚಂಪಾಷಷ್ಠೀ ಮಾಧ್ಯಾಹ್ನ ವ್ಯಾಪೀತಿಥಿ ಇದ್ದು ಶ್ರವಣಾ ನಕ್ಷತ್ರವೂ ಮಾಧ್ಯಾಹ್ನ ವ್ಯಾಪೀ ಇದ್ದರೂ ವಿಷ್ಣು ಪಂಚಕ ವ್ರತಾಭಾವ ಎಂದು ಕ್ರಿ. ಶಾ. ಶ. 1903 ದುರ್ಮತಿ ಸಂವತ್ಸರ ಮಾರ್ಗಶಿರ ಶುದ್ಧ ಷಷ್ಠೀ ಬುಧವಾರ ಬರೆದ್ದಾರೆ. ಗಮನಿಸಬೇಕು.

Rarest Archiver

ವಿಷ್ಣು ಪಂಚಕ ವ್ರತ ತರ್ಪಣದ ದೇವತೆಗಳು–

1) ಶುಕ್ಲ ಪಕ್ಷದ ಏಕಾದಶೀ–

ಓಂ ಕೇಶವಾಯ ನಮಃ, ನಾರಾಯಣಾಯ ನಮಃ, ಮಾಧವಾಯ ನಮಃ, ಗೋವಿಂದಾಯ ನಮಃ, ವಿಷ್ಣವೇ ನಮಃ, ಮಧುಸೂದನಾಯ ನಮಃ, ತ್ರಿವಿಕ್ರಮಾಯ ನಮಃ, ವಾಮನಾಯ ನಮಃ, ಶ್ರೀಧರಾಯ ನಮಃ, ಹೃಷೀಕೇಶಾಯ ನಮಃ, ಪದ್ಮನಾಭಾಯ ನಮಃ, ದಾಮೋದರಾಯ ನಮಃ ॥ (ಕೇಶವಾಯ ನಮಃ, ಕೇಶವಂ ತರ್ಪಯಾಮಿ ಇತ್ಯಾದಿಯಾಗಿ ಹೇಳುತ್ತ ತರ್ಪಣ ಕೊಡಬೇಕು)

2) ಕೃಷ್ಣ ಪಕ್ಷದ ಏಕಾದಶೀ–

ಓಂ ಸಂಕರ್ಷಣಾಯ ನಮಃ, ವಾಸುದೇವಾಯ ನಮಃ, ಪ್ರದ್ಯುಮ್ನಾಯ ನಮಃ, ಅನಿರುದ್ಧಾಯ ನಮಃ, ಪುರುಷೋತ್ತಮಾಯ ನಮಃ, ಅಧೋಕ್ಷಜಾಯ ನಮಃ, ನಾರಸಿಂಹಾಯ ನಮಃ, ಅಚ್ಯುತಾಯ ನಮಃ, ಜನಾರ್ದನಾಯ ನಮಃ, ಉಪೇಂದ್ರಾಯ ನಮಃ, ಹರಯೇ ನಮಃ, ಶ್ರೀಕೃಷ್ಣಾಯ ನಮಃ ॥

3) ಪೂರ್ಣಿಮಾ (ಹುಣ್ಣಿಮೆ) ತಿಥಿ–

ಓಂ ವಿಧವೇ ನಮಃ, ಶಶಿನೇ ನಮಃ, ಶಶಾಂಕಾಯ ನಮಃ, ಚಂದ್ರಾಯ ನಮಃ, ಸೋಮಾಯ ನಮಃ, ಉಡುಪಾಯ ನಮಃ, ಅಮೃತಾಯ ನಮಃ, ಮನೋಹರಾಯ ನಮಃ, ರಾಮಾಯ ನಮಃ, ಹಿಮಕೃತೇ ನಮಃ, ನಿಶಾಕೃತೇ ನಮಃ, ದೀಪ್ಯಮಾನ್ಯಾಯ ನಮಃ ॥

4) ಅಮಾವಾಸ್ಯೆ ತಿಥಿ–

ಓಂ ಮಹೀಧರಾಯ ನಮಃ, ಜಗನ್ನಾಥಾಯ ನಮಃ, ದೇವೇಂದ್ರಾಯ ನಮಃ, ದೇವಕೀಸುತಾಯ ನಮಃ, ಚತುರ್ಭುಜಾಯ ನಮಃ, ಗದಾಪಾಣಯೇ ನಮಃ, ಸುರಮೀಢಾಯ ನಮಃ, ಸುಲೋಚನಾಯ ನಮಃ, ಚಾರ್ವಾಂಗಾಯ ನಮಃ, ಚಕ್ರಪಾಣಯೇ ನಮಃ, ಸುರಮಿತ್ರಾಯ ನಮಃ, ಅಸುರಾಂತಕಾಯ ನಮಃ ॥

5) ಶ್ರವಣ ನಕ್ಷತ್ರ–

ಓಂ ಪುರುಷೋತ್ತಮಾಯ ನಮಃ, ಶಾರ್ಙ್ಗ ಧನ್ವಿನೇ ನಮಃ, ಗರುಡ ಧ್ವಜಾಯ ನಮಃ, ಅನಂತಾಯ ನಮಃ, ಗೋವರ್ಧನಾಯ ನಮಃ, ಪುಂಡರೀಕಾಕ್ಷಾಯ ನಮಃ, ನಿತ್ಯಾಯ ನಮಃ, ವೇದಗರ್ಭಾಯ ನಮಃ, ಯಜ್ಞಪುರುಷಾಯ ನಮಃ, ಸುಬ್ರಹ್ಮಣ್ಯಾಯ ನಮಃ, ಜಯಾಯ ನಮಃ, ಶೌರಯೇ ನಮಃ ॥

Rarest Archiver

ಶ್ರೀವಿಷ್ಣು ಪಂಚಕ ವ್ರತೋದ್ಯಾಪನೆ–

ಶ್ರೀವಿಷ್ಣುಪಂಚಕ ವ್ರತವು ಪೂರ್ಣ ಫಲಪ್ರದವಾಗಲು ಉದ್ಯಾಪನೆಯನ್ನು ಮಾಡಬೇಕು. ಈ ಉದ್ಯಾಪನೆಯನ್ನು ವ್ರತದ ಆರಂಭದಲ್ಲಿಯಾಗಲೀ, ಮಧ್ಯದಲ್ಲಿ ಆಗಲೀ, ಅಥವಾ ವ್ರತಪರಿಸಮಾಪ್ತಿ ಕಾಲದಲ್ಲಿಯಾಗಲೀ, ಮಾಡಬಹುದು. ಈ ಸಂದರ್ಭದಲ್ಲಿ 60 ಜನ ದಂಪತಿಗಳಿಗೆ ಭೋಜನ ಮಾಡಿಸುವದು ವಿಶೇಷ ಫಲದಾಯಕವಾಗಿದೆ. ಈ ವ್ರತವನ್ನು ಮೊದಲೇ ತಿಳಿಸಿದಂತೆ ಪುರುಷರಾಗಲೀ, ಸ್ತ್ರೀಯರಾಗಲೀ ಮಾಡಬಹುದು.

ವ್ರತ ಮಾಡುವುದನ್ನು ಪ್ರಾರಂಭಿಸಿದ ಮೇಲೆ ಆ ವ್ರತವು ಯಾವ ಕಾರಣದಿಂದಲಾದರೂ ನಿಲ್ಲುವ ಪರಿಸ್ಥಿತಿ ಬಂದರೆ ಅವರ ಮಕ್ಕಳಾಗಲೀ, ಪತಿ ಅಥವಾ ಪತ್ನಿಯಾಗಲೀ ಪೂರ್ಣಗೊಳಿಸಬಹುದೆಂದು ಶ್ರೀವಿಷ್ಣುರಹಸ್ಯದಲ್ಲಿ ತಿಳಿಸಿದ್ದಾರೆ.

ಶ್ರೀವಿಷ್ಣುಪಂಚಕ ವ್ರತ ನಿರ್ಣಯದ ಕುರಿತು ಮುಂದೆ ಕೊಡಲಾಗಿದೆ.

॥ ಶ್ರೀಮಧ್ವೇಶಾರ್ಪಣಮಸ್ತು ॥

Rarest Archiver

॥ ಶ್ರೀಃ ॥

ಶ್ರೀ ವಿಷ್ಣುಪಂಚಕ ವ್ರತ ಕಥಾ

ಸೂತ ಉವಾಚ–

ದ್ವಾಪರಾಂತೇ ಮಹಾರಾಜಃ ಕುಂತೀಪುತ್ರೋ ಯುಧಿಷ್ಠಿರಃ ।
ಭ್ರಾತೃಭಿಃ ಸಹ ಧರ್ಮಾತ್ಮಾ ದ್ರೋಣಂ ಭೀಷ್ಮಂ ತಥಾ ಕುರೂನ್ ॥1॥

ಪುತ್ರಾನ್ ಪೌತ್ರಾಂಸ್ತಥಾ ಭ್ರಾತೃನನ್ಯಾನಪಿ ಮಹೀಪತೀನ್ ।
ರಾಜ್ಯಸ್ಯ ಹೇತವೇ ತತ್ರ ಕುಲಕ್ಷಯಮಥಾಕರೋತ್ ॥2॥

ಹತ್ವಾ ವಂಶ್ಯಾನ್ ಗುರೂನ್ ರಾಜಾ ಪಶ್ಚಾತ್ತಾಪೇನ ತಾಪಿತಃ ।
ರಾಜ್ಯಂ ಕುರ್ವನ್‌ಮಹೀಪಾಲಸ್ತತ್ಪಾಪಕ್ಷಯ ಕಾರಣಾತ್ ॥3॥

ಚತುರಂಗ ಬಲೋಪೇತೋ ಭ್ರಾತೃಭಿಃ ಪರಿವಾರಿತಃ ।
ಯತ್ರ ಸಂಸ್ಥೀಯತೇ ಕೃಷ್ಣೋ ದ್ವಾರವತ್ಯಾಂ ಜಗತ್‌ಪ್ರಭುಃ ॥4॥

ಸ ಜಗಾಮ ತದಾ ತತ್ರ ಪ್ರಣಮ್ಯ ಜಗದೀಶ್ವರಮ್ ।
ಕೃಷ್ಣಂ ಸಂಸ್ತೂಯ ವಚಸಾ ತೇನಾಪಿ ಪ್ರತಿನಂದಿತಃ ॥5॥

ಪಪ್ರಚ್ಛ ಕುರುವಂಶ್ಯಾನಾಂ ವಧದೋಷ ಪ್ರಶಾಂತಯೇ ।
ವ್ರತಮೇಕಂ ಸಮಾಚಕ್ಷ್ವ ಯೇನ ಪಾಪಂ ಪ್ರಶಾಮ್ಯತಿ ॥6॥

ಕುಲಕ್ಷಯ ಕೃತಂ ದೋಷಂ ಅಪಹರ್ತುಂ ತ್ವಮರ್ಹಸಿ ।
ಇತಿ ವಿಜ್ಞಾಪನಂ ಕೃತ್ವಾ ಪಶ್ಚಾತ್ತಾಪೀಽಭವತ್ಪುನಃ ॥7॥

ಯುಧಿಷ್ಠಿರ ಉವಾಚ–

ಯತ್ಕೃತ್ವಾ ಮುಚ್ಯತೇ ಜಂತು ರ್ಮಹಾಪಾತಕ ಪಂಚಕಾತ್ ।
ತದ್ವ್ರತಂ ಬ್ರೂಹಿ ಗೋವಿಂದ ಯದಿತುಷ್ಟೋಽಸಿ ಕೇಶವ ॥8॥

ಶ್ರೀಕೃಷ್ಣ ಉವಾಚ–

ಸಾಧು ಸಾಧು ಮಹಾಭಾಗ ಶೃಣು ಷ್ವೇಕಾಗ್ರಮಾನಸಃ ।
ಯೇನ ಸಂಚೀರ್ಣಮಾಣೇನ ಮುಚ್ಯತೇ ಪಂಚಪಾತಕೈಃ ॥9॥

ತಥಾ ವ್ರತಮಿದಂ ವಕ್ಷ್ಯೇ ಮಮ ಪ್ರಾಣಸ್ತ್ವಮೇವಹಿ ।
ನಿಮಿತ್ತಮಾತ್ರಂತು ಭವಾನ್ ಕುಲಕ್ಷಯಃ ಕೃತಂ ಮಯಾ ॥10॥

Rarest Archiver

ಪ್ರೌಷ್ಠಪದ್ಯಾಂ ಸಿತೇ ಪಕ್ಷೇ ದ್ವಾದಶ್ಯಾಂ ಶ್ರವಣೇಯದಿ ।
ತದಾರಭ್ಯ ವ್ರತಂ ಕಾರ್ಯಂ ಮಾರ್ಗಶೀರ್ಷೇಽಥವಾನೃಪ ॥11॥

ಏಕಾದಶ್ಯಾಮುಪವಶೇತ್ ಪ್ರತಿಪಕ್ಷೇ ಚ ಪರ್ವಣಿ ।
ಶ್ರವಣೇ ಚ ತಥೋಪೋಷ್ಯ ಪೂಜಯೇದ್ಗರುಡಧ್ವಜಂ ॥12॥

ಏವಂ ಸಂವತ್ಸರಂ ಯಾವತ್ತಾವತ್ಸಂಪೂಜ್ಯ ಕೇಶವಂ ।
ವತ್ಸರಾಂತೇ ಪ್ರಕುರ್ವೀತ ಪಂಚಮೂರ್ತಿಂ ಜನಾರ್ದನಂ ॥13॥

ಸಶ್ರೀಕಂ ಚ ಸಗದಂ ಶಂಖಚಕ್ರಾದಿ ಭಿರ್ಯುತಂ ।
ಹೋಮಂ ತತ್ರಪ್ರಕುರ್ವೀತ ಏಭಿರ್ನಾಮಪದೈಃ ಶುಭೈಃ ॥14॥

ಶ್ರವಣೇ ದೇವತಾನಾಂ ಚ ಅಪೂಪೈರ್ಜುಹುಯಾದ್ವ್ರತಮ್ ।
ಪುರುಷೋತ್ತಮಃ ಶಾರ್ಂಗಧನ್ವಾ ತಥೈವ ಗರುಡಧ್ವಜಃ ॥15॥

ಗೋವರ್ಧನೋ ಹ್ಯನಂತಶ್ಚ ಪುಂಡರೀಕಾಕ್ಷ ಏವ ಚ ।
ತಥಾನಿತ್ಯೋ ವೇದಗರ್ಭೋ ಯಜ್ಞಪೂರುಷ ಏವ ಚ ॥16॥

ಸುಬ್ರಹ್ಮಣ್ಯೋ ಜಯಃ ಶೌರೀರೇತಾಃ ಶ್ರವಣ ದೇವತಾಃ ।
ಶುಕ್ಲದ್ವಾದಶಿ ದೇವೇಭ್ಯೋ ಜುಹುಯಾದ್ಗುಡ ಪಾಯಸಮ್ ॥17॥

ನಾಮಭಿಃ ಕೇಶವಾದ್ಯೈಶ್ಚ ದ್ವಾದಶೈರ್ಜುಹುಯಾತ್ ಸುಧೀಃ ।
ಏತಾಃ ಸಂಪೂಜಯೇತ್ ಶುಕ್ಲದಾದಶ್ಯಾಮಧಿದೇವತಾಃ ॥18॥

ಪೌರ್ಣಮಾಸಾಶ್ಚ ದೇವೇಭ್ಯೋ ಜುಹುಯಾತ್ ಘೃತ ಪಾಯಸಮ್ ।
ವಿಧುಃ ಶಶೀ ಶಶಾಂಕಶ್ಚ ಚಂದ್ರಃ ಸೋಮಸ್ತಥೋಡುಪಃ ॥19॥

ಮನೋಹರೋಽಮೃತಾಂಶುಶ್ಚ ಹಿಮಾಂಶುಃ ಪಾವನಸ್ತಥಾ ।
ನಿಶಾಕರಶ್ಚಂದ್ರಮಾಶ್ಚ ಪೂರ್ಣಿಮಾದೇವತಾಃ ಕ್ರಮಾತ್ ॥20॥

ಕೃಷ್ಣದ್ವಾದಶಿ ದೇವೇಭ್ಯೋ ಪಂಚಾಮೃತತಿಲೋದನಮ್ ।
ಸಂಕರ್ಷಣಾದಿ ನಾಮಾನಃ ಕೃಷ್ಣದ್ವಾದಶಿದೇವತಾಃ ॥21॥

ಮುದ್ಗೋದನ ತಿಲಾಜ್ಯಂ ಚ ಅಮಾವಾಸ್ಯಾಂ ಜುಹೂಯತೇ ।
ಮಹೀಧರೋ ಜಗನ್ನಾಥೋ ದೇವೇಂದ್ರೋ ದೇವಕೀಸುತಃ ॥22॥

ಚತುರ್ಭುಜೋ ಗದಾಪಾಣಿಃ ಸುರಮೀಢಃ ಸುಲೋಚನಃ ।
ಚಾರ್ವಾಂಗ ಚಕ್ರಪಾಣಿಶ್ಚ ಸುರಮಿತ್ರೋಽಸುರಾಂತಕಃ ॥23॥

Rarest Archiver

ದರ್ಶಸ್ಯ ಪಕ್ಷಮಾಸೇಷು ದೇವತಾಃ ಷಷ್ಠಿ ಕೀರ್ತಿತಾಃ ।
ಸ್ವಾಹಾಕಾರಾನ್ವಿತೈರೇ ತೈಶ್ಚತುರ್ಥ್ಯಂತೈಶ್ಚ ನಾಮಭಿಃ ॥24॥

ಏವಂ ವಿಧಿ ವಿಧಾನಂ ಚ ಹೋತವ್ಯಂ ಚ ಪೃಥಕ್ ಪೃಥಕ್ ।
ಹೋಮಾಂತೇ ಪೂಜಯೇದ್ವಸ್ತ್ರೈಃ ಭಕ್ತ್ಯಾ ಭೂಷಣೈಃ ಶುಭೈಃ ॥25॥

ಭೂಮಿಂ ಸಸ್ಯವತೀಂ ಶ್ರೇಷ್ಠಾಂ ಸವತ್ಸಾಂ ಗಾಂ ಪಯಸ್ವಿನೀಮ್ ।
ಗೋಮೇದಂ ಪುಷ್ಪರಾಗಂ ಚ ವೈಡೂರ್ಯಂ ಚೇಂದ್ರನೀಲಕಮ್ ॥26॥

ಮಾಣಿಕ್ಯಂ ಚ ಪ್ರದಾತವ್ಯಂ ಪಂಚಪಾತಕ ನಾಶನಮ್ ।
ಪಂಚರತ್ನಾನಿ ದೇಯಾನಿ ಪಾತಕ ಕ್ಷಯ ಹೇತವೇ ॥27॥

ಪಂಚ ಮೂರ್ತೀಃ ಸುವರ್ಣೇನ ಜಾತರೂಪಂ ಜನಾರ್ದನಮ್ ।
ಸವಸ್ತ್ರಂ ಸಕಲಶಂ ಚೈವ ಆಚಾರ್ಯಾಯ ನಿವೇದಯೇತ್ ॥28॥

ಇರಾವತೀತಿ ಮಂತ್ರೇಣ ಗಾಂ ದದ್ಯಾತ್ ಪಯಸ್ವಿನೀಮ್ ।
ಘೃತಾವತೀತಿ ಸೂಕ್ತೇನ ಭೂದಾನಂ ಕಾರಯೇತ್ತತಃ ॥29॥

ಸೋಮಾ ರುದ್ರೇತಿ ಮಂತ್ರೇಣ ದದ್ಯಾತ್ ರತ್ನಾನಿ ಶಕ್ತಿತಃ ।
ತದ್ವಿಷ್ಣೋರಿತಿ ಮಂತ್ರೇಣ ಮೂರ್ತಿದಾನಂ ಪ್ರಕಾರಯೇತ್ ॥30॥

ಹಿರಣ್ಯಗರ್ಭ ಮಂತ್ರೇಣ ದಾತವ್ಯಂ ಚ ಹಿರಣ್ಯಕಮ್ ।
ಮಹಾಪಾತಕ ಪಂಚಾನಾಂ ಕ್ಷಯಂ ಯಾಂತಿ ನ ಸಂಶಯಃ ॥31॥

ಬ್ರಹ್ಮಾಣಂ ಚ ಗಣೇಶಂ ಚ ವಸ್ತ್ರಾಲಂಕಾರಭೂಷಣೈಃ ।
ವ್ರತಾಂತೇ ಪೂಜಯೇದ್ ಭಕ್ತ್ಯಾ ಗೋ ಭೂರತ್ನ ಹಿರಣ್ಯಕೈಃ ॥32॥

ದತ್ವಾ ಪ್ರದಕ್ಷಿಣಂ ಕೃತ್ವಾ ಯಥಾನುಜ್ಞಾ ವಿಸರ್ಜಯೇತ್ ।
ಬ್ರಾಹ್ಮಣಾನ್ ಭೋಜಯೇತ್ ಭಕ್ತ್ಯಾ ಪಶ್ಚಾದ್ವಿದ್ವಾದಶ ಸಂಖ್ಯಯಾ ॥33॥

ಬ್ರಹ್ಮಹತ್ಯಾಸುರಾಪಾನ ಸುವರ್ಣ ಸ್ತೇಯ ಮೇವ ಚ ।
ಗುರುಸ್ತ್ರೀ ಗಮನಂ ಚೈವ ತತ್ಸಂಯೋಗೀ ಚ ಪಂಚಮಃ ॥34॥

ಗೋಘ್ನಶ್ಚೈವ ಕೃತಘ್ನಶ್ಚ ಭ್ರೂಣಹಾ ವೃಷಲೀಪತಿಃ ।
ಅನ್ಯೇಭ್ಯೋ ವಿವಿಧೇಭ್ಯಶ್ಚ ಪಾಪೇಭ್ಯೋ ಮುಚ್ಯತೇ ನರಃ ॥35॥

ವಸತೇ ತತ್ರ ವೈಕುಂಠೇ ಯಾವದ್ವಿಷ್ಣುಃ ಸನಾತನಃ ।
ಇಹಲೋಕೇ ಸುಖಂ ಸ್ಥಿತ್ವಾ ಪುತ್ರ ಪೌತ್ರಾದಿ ಸಂಪದಃ ॥36॥

Rarest Archiver

ಅವಿಚ್ಛಿನ್ನಾನ್ ಪ್ರಿಯಾನ್ ಭುಕ್ತ್ವಾ ಅಂತೇಯಾತಿ ಪರಾಂಗತಿಂ ।
ತಸ್ಮಾತ್ತ್ವಂ ಕುರುರಾಜೇಂದ್ರ ವ್ರತಂ ಪಾತಕನಾಶನಂ ॥37॥

ಅಥಾನ್ಯದಪಿರಾಜೇಂದ್ರ ವಕ್ಷ್ಯಾಮಿ ಸುಕಥಾಂತರಂ ।
ಅಯ್ಯೋಧ್ಯಾನಗರೇ ರಮ್ಯೇ ತ್ರೇತಾಯಾಂ ಚ ಯುಗೇ ತಥಾ ॥38॥

ರಾಜಾ ದಶರಥೋ ನಾಮ ಶಶಾಸ ಪೃಥಿವೀಮಿಮಾಂ ।
ಸರಾಜಾ ಮೃಗ ಸಂಗೇನ ಜಗಾಮ ಗಹನಂವನಂ ॥39॥

ಸರಯೂ ನಾಮ ನದ್ಯಾಯಾಃ ತೀರೇ ಗತ್ವಾ ಮಹಾವನೇ ।
ಧನುರ್ಬಾಣ ಯುತೋರಾತ್ರೌ ಸ್ಥಿತೋಽಸೌ ಮೃಗಶೋಧನೇ ॥40॥

ಅರ್ಧರಾತ್ರೌವತೀತಾಯಾಂ ತಸ್ಯಾಂ ರಾತ್ರೌ ಮುನೀಶ್ವರಃ ।
ಪಿತೃಭಕ್ತಿಸದಾಚಾರಃ ಪಿತರೌ ತೇನ ನೀಯತೇ ॥41॥

ತಸ್ಯತೌ ಪಿತರೌ ತತ್ರ ತೃಷಯಾ ಪೀಡಿತೌ ತದಾ ।
ಜಲಮಾನೀಯತಾಂ ಪುತ್ರ ಇತಿ ಸಂಪ್ರೇಷಿತಸ್ತದಾ ॥42॥

ಸ್ವಕುಂಭೋ ಮುನಿ ಪುತ್ರೇಣ ಜಲಪೂರ್ಣಮಕಾರಿ ಚ ।
ನಿಶಮ್ಯ ರಾಜಾ ತತ್ ಶಬ್ದಂ ಮುಮೋಚ ಶರಮುತ್ತಮಂ ॥43॥

ಮೃಗಯಾನ್ವೇಷಿಣೋ ರಾಜಾ ಮೃಗಬುದ್ಧ್ಯಾಜಘಾನ ತಂ ।
ತೇನ ರಾಜ್ಞಾಕೃತಾತತ್ರ ಬ್ರಹ್ಮಹತ್ಯಾ ಮಹಾದ್ಭುತಾ ॥44॥

ಆತ್ಮಾನಂ ಬ್ರಹ್ಮಹಂತಾರಂ ಜ್ಞಾತ್ವಾ ರಾಜಾ ಸುದುಃಖಿತಃ
ತತ್ಪಾಪಶಮನೇ ರಾಜಾ ನೈಮಿಷಾರಣ್ಯವಾಸಿನಃ ॥45॥

ತತ್ರಗತ್ವಾ ಜ್ಞಾನ ವೃದ್ಧಾನ್ ಪ್ರಣಿಪತ್ಯಯಥಾಕ್ರಮಂ ।
ಸೂತಂ ಚ ವಾಮದೇವಂ ಚ ಜಾಬಾಲಿಮಥಕಾಶ್ಯಪಂ ॥46॥

ಪುರೋಹಿತಂ ವಸಿಷ್ಠಂ ಚ ಋಷೀಣಾಮುತ್ತಮಂ ಋಷಿಂ ।
ಶೃಣ್ವಂತು ಮುನಯಃ ಸರ್ವೇ ಬ್ರಹ್ಮಹತ್ಯಾ ಮಯಾ ಕೃತಾ ॥47॥

ಕಥಂ ಪಾಪಾದ್ವಿಮುಚ್ಯೇಽಹಂ ತಂ ಕುರ್ವಂತು ಮಹರ್ಷಯಃ ।
ಕ್ಷಣಂ ಧ್ಯಾತ್ವಾ ವಾಮದೇವೋ ರಾಜಾನಮಿದಮಬ್ರವೀತ್ ॥48॥

ರಾಜನ್ ರಘುಕುಲಶ್ರೇಷ್ಠ ಕುರುತ್ವಂ ವ್ರತಮುತ್ತಮಂ ।
ವಿಷ್ಣುಪಂಚಕಸಂಜ್ಞಂ ಚ ಪಂಚಪಾತಕ ನಾಶನಂ ॥49॥

Rarest Archiver

ಮಾಸಿ ಭಾದ್ರಪದೇ ಶುಕ್ಲೇ ದ್ವಾದಶ್ಯಾಂ ಶ್ರವಣಂ ಯದಿ ।
ತದಾರಭ್ಯ ವ್ರತಂ ಕಾರ್ಯಂ ಮಾರ್ಗಶೀರ್ಷೇಽಥವಾ ನೃಪ ॥50॥

ಏಕಾದಶೀ ದ್ವಯಂ ಮಾಸಿ ಶ್ರವಣೇ ಪೌರ್ಣಮಾಸಿಕೇ ।
ದರ್ಶೇ ಚೋಪೋಷ್ಯಯೇದ್ಭಕ್ತ್ಯಾ ವರ್ಷಮೇಕಂ ಕುರೂದ್ವಹ ॥51॥

ಏಕಾದಶೀದ್ವಯಂ ಚೈವ ಶ್ರವಣಂ ವಿಷ್ಣುದೈವತಂ ।
ಪೌರ್ಣಮಾಸ್ಯಾಂ ಚ ಶಶಿನಂ ದರ್ಶೇ ವಿಷ್ಣುಂ ಸನಾತನಂ ॥52॥

ದ್ವಾದಶೈರ್ನಾಮಭಿಃ ಭಕ್ತ್ಯಾ ಪ್ರತ್ಯೇಕಂ ಪೂಜಯೇದ್ಧರಿಂ ।
ಮಾಸೇ ಮಾಸೇ ಪಂಚಧಾ ಚ ಪೂಜನೀಯೋ ಜಗತ್ಪ್ರಭುಃ ॥53॥

ನಾಮಭಿರ್ದ್ವಾದಶೈರ್ಮಾಸೈಃ ಪಂಚದ್ವಾದಶ ಸಂಖ್ಯಯಾ ।
ಉದ್ಯಾಪನಂ ತತಃ ಕಾರ್ಯಂ ಆದೌ ಮಧ್ಯೇ ಪ್ರಯತ್ನತಃ ॥54॥

ಅಂತೇ ವಾಪಿ ಪ್ರಕರ್ತವ್ಯಂ ವ್ರತ ಷಾಡ್ಗುಣ್ಯ ಹೇತವೇ ।
ಘೃತಾಪೂಪೈಶ್ಚ ಶ್ರವಣೇ ಶುಕ್ಲೇ ತು ಗುಡಪಾಯಸಂ ॥55॥

ಪಾಯಸಾಜ್ಯಂ ಪೌರ್ಣಮಾಸ್ಯಾಂ ಕೃಷ್ಣೇ ಪಂಚಾಮೃತೋದಯಂ ।
ದರ್ಶೇ ಮುದ್ಗೋದನತಿಲೈಃ ಹೋತವ್ಯಂ ಚ ಸಸರ್ಪಿಷಾ ॥56॥

ಅನೇನ ವಿಧಿನಾ ಹುತ್ವಾ ಕುರುಷ್ವ ವ್ರತ ಮುತ್ತಮಂ ।
ಪಾಪೇಭ್ಯೋ ಮುಚ್ಯಸೇ ಯತ್ರ ಪೌತ್ರಾದಿ ಶ್ರಿಯ ಮಾಪ್ನುಯಾತ್ ॥57॥

ತೇಷಾಂ ತದ್ವಚನಂ ಶ್ರುತ್ವಾ ಚಕಾರ ವ್ರತಮುತ್ತಮಂ ।
ರಾಜಾ ದಶರಥಃ ಸದ್ಯಃ ಮುಕ್ತೋಽಭೂತ್ ಪಾತಕಾತ್ತದಾ ॥58॥

ತತಃ ಕೃತ್ವಾ ವೃತ್ರ ವಧಾತ್ ಶಕ್ರೋ ವೈ ಪಾಕಶಾಸನಃ ।
ಅಹಲ್ಯಾ ಸಂಗದೋಷಾತ್ ಸುರಾಪಾನಾದ್ಬೃಹಸ್ಪತಿಃ ॥59॥

ಗುರುಸ್ತ್ರೀಗಮನಾಚ್ಚಂದ್ರಃ ಸುವರ್ಣಾಹರಣಾದ್ಬಲಿಃ ।
ಅತೋಽನ್ಯೇಽಪಿ ಮಹೀಪಾಲಾಃ ದಿಲೀಪ ಸಗರಾದಯಃ ॥60॥

ಮಹಾಪಾತಕ ಜಾದ್ದೋಷಾದ್ವಿಮುಕ್ತಾಶ್ಚೋಪ ಪಾತಕೈಃ ।
ತಸ್ಮಾತ್ತ್ವಮಪಿರಾಜೇಂದ್ರ ಕುರುಷ್ವ ವ್ರತಮುತ್ತಮಂ ॥61॥

ಕುಲಕ್ಷಯ ಕೃತ್ವಾಚ್ಚೈವ ದೋಷೇಭ್ಯಶ್ಚ ವಿಮುಚ್ಯಸೇ ।
ಯದಿಚ್ಛಸಿ ಮಹಾರಾಜ ಶಾಶ್ವತೀಂ ಗತಿಮಾತ್ಮನಃ ॥62॥

3

Rarest Archiver

J. V.P

ಮಾಕುರುಷ್ವಾತ್ರ ಸಂದೇಹಂ ಕುರುಷ್ವವ್ರತ ಮುತ್ತಮಂ ।
ಶ್ರೋತವ್ಯಂ ಸಮುಪಾಖ್ಯಾನಂ ಮಹಾಪಾತಕ ನಾಶನಂ ॥63॥

ಸರ್ವೇಷಾಮುತ್ತಮಂ ಪುಣ್ಯಂ ಸರ್ವಕಾಮ ಫಲಪ್ರದಮ್ ।
ಯೇ ಕುರ್ವಂತಿ ವ್ರತಮಿದಂ ತೇ ಯಾಂತಿ ಪರಮಾಂ ಗತಿಂ ॥64॥

ವ್ರತಾನಾಮುತ್ತಮಂ ಚೈವ ತದ್ವ್ರತಂ ವಿಷ್ಣು ಪಂಚಕಂ ।
ಉಪಾಖ್ಯಾನಮಿದಂ ತತ್ರ ತತ್ಸರ್ವಂ ಸಫಲಂ ಭವೇತ್ ॥65॥

ಯೇ ಚ ಶೃಣ್ವಂತಿ ಸತತಂ ಯೇ ಪಠಂತಿ ದ್ವಿಜೋತ್ತಮಾಃ ।
ತೇ ಸರ್ವೇ ಪಾಪನಿರ್ಮುಕ್ತಾಃ ಯಾಸ್ಯಂತಿ ಪರಮಾಂಗತಿಂ ॥66॥

ಕಥಾನುವಾದಿನಂ ಭಕ್ತ್ಯಾ ಪೂಜಯೇದ್ಭಕ್ತಿಭಾವತಃ ।
ತೇನ ಸಂತುಷ್ಯತೇ ವಿಷ್ಣುಃ ಜಗತ್ಕರ್ತಾಜನಾರ್ದನಃ ॥67॥

॥ ಇತಿ ಶ್ರೀ ಭವಿಷ್ಯೋತ್ತರ ಪುರಾಣೇ ಕೃಷ್ಣಯುಧಿಷ್ಠಿರ ಸಂವಾದೇ ವಿಷ್ಣುಪಂಚಕ ಕಥಾ ಸಂಪೂರ್ಣಂ ಶ್ರೀಕೃಷ್ಣಾರ್ಪಣಮಸ್ತು ॥

⊙

Rarest Archiver

|| ಶ್ರೀಃ ||

ಶ್ರೀ ವಿಷ್ಣು ಪಂಚಕ ವ್ರತೋದ್ಯಾಪನಕ್ಕೆ ಬೇಕಾಗುವ ಪದಾರ್ಥಗಳು

ಅರಿಷಿಣ	ಖಣ -1
ಕುಂಕುಮ	ಕಲಶಕ್ಕೆ ಥಾಲಿ - 6
ಮಂತ್ರಾಕ್ಷತೆ	ಹೋಮಕ್ಕೆ ತುಪ್ಪ
ಅಡಿಕಿ ಬೆಟ್ಟ ಅರ್ಧ ಕೆ.ಜಿ.	ಹೋಮಕ್ಕೆ ಚಕ್ಕಿ
ವೀಳ್ಯೆದೆಲೆ 100	ತುಳಸೀ ಕಾಷ್ಠ
ಉತ್ತತ್ತಿ ಕಾಲ ಕೆ.ಜಿ.	ಗಂಧದ ಚಕ್ಕಿ
ಖೊಬ್ರಿ ಬಟ್ಟಲು - 3	ಹೂವು
ಟೆಂಗಿನ ಕಾಯಿ - 8	ತುಳಸಿ
ವಿಷ್ಣು ಪ್ರತಿಮಾ - 6	ಕರಿಕೆ
ಪಂಚಗವ್ಯದ ಪದಾರ್ಥಗಳು	ಹೂಬತ್ತಿ
ಪಂಚಾಮೃತ ಪದಾರ್ಥಗಳು	ಮಂಗಳಾರತಿ ಬತ್ತಿ
ಅನಾರಸ	ಮಣೆಗಳು - 6
ಪರಮಾನ್ನ ಸಕ್ಕರಿದ್ದು	ಸಮೆ - 1
ಹುಗ್ಗಿ	ತಂಬಿಗಿ
ಬಿಳೇ ಸಾಸವಿ	ಥಾಲಿ
ಪಂಜೆ - 6	ಸೌಟು
ಪರಮಾನ್ನ ಬೆಲ್ಲದ್ದು	ಥಾಬಾಣ
ಎಳ್ಳು	

⊙

Rarest Archiver

|| ಶ್ರೀಃ ||

ಶ್ರೀವಿಷ್ಣು ಪಂಚಕ ವ್ರತೋದ್ಯಾಪನ ಪ್ರಯೋಗ

ಹರಿಃ ಓಂ || ದೇಶಕಾಲೌ ಸಂಕೀರ್ತ್ಯ, ಮಮ ಇಹಜನ್ಮನಿ ಜನ್ಮಾಂತರೇ ವಾ ಬಾಲ್ಯ, ಕೌಮಾರ, ಯೌವನ, ವಾರ್ಧಕೇಷು, ಜಾಗ್ರತ, ಸ್ವಪ್ನ, ಸುಷುಪ್ತಿ ಅವಸ್ಥಾಸು, ವಾಙ್ಮನಃ ಕಾಯಕರ್ಮೇಂದ್ರಿಯ ವ್ಯಾಪಾರೈಃ ಜ್ಞಾನತೋಽಜ್ಞಾನತಶ್ಚ ಬ್ರಹ್ಮಹನನ, ಮದ್ಯಪಾನ, ಸ್ವರ್ಣಸ್ತೇಯ, ಗುರುತಲ್ಪಗಮನ, ಅಗಮ್ಯಾಗಮನ, ತತ್ಸಂಸರ್ಗ ಜನಿತ ಸಮಸ್ತ ಉಪಪಾತಕಾನಾಂ ಮಹಾಪಾತಕಾನಾಂ ಚ ಪ್ರಾಯಶ್ಚಿತ್ತಾರ್ಥಂ ಆಚರಿತಸ್ಯ ವಿಷ್ಣು ಪಂಚಕ ವ್ರತಸ್ಯ ಸಂಪೂರ್ಣತಾ ಸಿದ್ಧ್ಯರ್ಥಂ ಉದ್ಯಾಪನಂ ಕರಿಷ್ಯೇ ||

ಆದೌ ಮಹಾಗಣಪತಿ ಪೂಜನಂ ಸ್ವಸ್ತಿ ಪುಣ್ಯಾಹವಾಚನಂ ಕೃತ್ವಾ-ಮಹೀದ್ಯೌರಿತ್ಯಾದಿ ಮಂತ್ರೈಃ ಸರ್ವತೋ ಭದ್ರೇ ಬ್ರಹ್ಮಾದಿ ದೇವತಾವಾಹನಂ, ಕಲಶಸ್ಥಾಪನಂ, ಪ್ರತಿಮಾನಾಂ ಅಗ್ನ್ಯುತ್ತಾರಣಂ ಚ ಕೃತ್ವಾ ಪೂಜಾ ಯೋಗ್ಯತಾ ಸಿದ್ಧ್ಯರ್ಥಂ ಪ್ರಾಣಪ್ರತಿಷ್ಠಾಪನಂ ಚ ಕರಿಷ್ಯೇ ||

ಮಂಟಪಧ್ಯಾನಂ । ತತಃ ಭೂತೋಚ್ಚಾಟನಾಸನ ದಿಗ್ಬಂಧನಾಂತಂ ಕೃತ್ವಾ, ತತ್ವನ್ಯಾಸ - ಮಾತೃಕಾನ್ಯಾಸಂ ಕೃತ್ವಾ ಭಗವತ್ಪೂಜಾ ಸಂಕಲ್ಪಃ । ಕಲಶಾರ್ಚನಂ ಶಂಖಪೂಜಾಂ ಚ ಕೃತ್ವಾ, ಪಂಚಾಮೃತ ದೇವತಾ ಪೂಜಾಂ ತಥಾ ಪೀಠಪೂಜಾಂ ಕುರ್ಯಾತ್ । ತ್ರೀಣಿ ಪದೇತಿ ಕಲಶೇ ವಿಷ್ಣುಮಾವಾಹ್ಯ । ಪರಿತಃ ಪುರುಷೋತ್ತಮಾದಿ ದ್ವಾದಶ ದೇವತಾ ಆವಾಹಯೇತ್ । ತದ್ವಿಷ್ಣೋರಿತಿ ಶುಕ್ಲೈಕಾದಶೀ ಕಲಶೇ ವಿಷ್ಣುಮಾವಾಹ್ಯ, ಪರಿತಃ ಕೇಶವಾದಿ ದೇವತಾಃ ಆವಾಹಯೇತ್ । ತದ್ವಿಪ್ರಾಸೋ ಇತಿ ಪೌರ್ಣಿಮಾ ಕಲಶೇ ವಿಷ್ಣುಮಾವಾಹ್ಯ ಪರಿತಃ ವಿಧ್ವಾದಿದ್ವಾದಶ ದೇವತಾ ಆವಾಹಯೇತ್ । ಅತೋ ದೇವೇತಿ ಕೃಷ್ಣೈಕಾದಶೀ ಕಲಶೇ ವಿಷ್ಣುಮಾವಾಹ್ಯ ಪರಿತಃ ಸಂಕರ್ಷಣಾದಿ ದ್ವಾದಶ ದೇವತಾ ಆವಾಹಯೇತ್ । ಇದಂ ವಿಷ್ಣುರಿತಿ ಅಮಾಕಲಶೇ ವಿಷ್ಣುಮಾವಾಹ್ಯ ಪರಿತಃ ಮಹೀಧರಾದಿ ದ್ವಾದಶದೇವತಾ ಆವಾಹಯೇತ್ । ತಸ್ಮಿನ್ ಪೀಠೇ ಬಿಂಬ ಮೂರ್ತಿಮಾವಾಹಯೇತ್ ।

ಓಂ ಧ್ಯಾಯೇ ದ್ಧರಿನ್ ಮಣಿನಿಭಂ ಜಗದೇಕವಂದ್ಯಂ ಸೌಂದರ್ಯ ಸಾರಮರಿಶಂಖ ವರಾಭಯಾನಿ । ದೋರ್ಭಿರ್ದಧಾನಮಜಿತಂ ಸರಸಂ ಚ ಭೈಷ್ಮೀ ಸತ್ಯಾ ಸಮೇತ ಮಖಿಲಪ್ರದಮಿಂದಿರೇಶಂ || ಇತಿ ಧ್ಯಾತ್ವಾ || ಧ್ಯಾನಂ ಸಮರ್ಪಯಾಮಿ । ಸಹಸ್ರಶೀರ್ಷಾ ಪುರುಷಃ, ಆವಾಹನಂ ಸಮರ್ಪಯಾಮಿ । ಪುರುಷ ಏವೇದಂ, ಆಸನಂ ಸಮರ್ಪಯಾಮಿ । ಏತಾವಾನಸ್ಯ ಮಹಿಮಾ, ಪಾದ್ಯಂ ಸಮರ್ಪಯಾಮಿ । ತ್ರಿಪಾದೂರ್ಧ್ವ ಅರ್ಘ್ಯಂ ಸಮರ್ಪಯಾಮಿ । ತಸ್ಮಾದ್ವಿರಾಳಜಾಯತ, ಆಚಮನಂ ಸಮರ್ಪಯಾಮಿ । ಯತ್ಪುರುಷೇಣ, ಪಂಚಾಮೃತ ಸ್ನಾನಂ, ಶುದ್ಧೋದಕ ಸ್ನಾನಂ ಸಮರ್ಪಯಾಮಿ । ತಂಯಜ್ಞಂ ಬರ್ಹಿಷಿ, ವಸ್ತ್ರಂ ಸಮರ್ಪಯಾಮಿ । ತಸ್ಮಾದ್ಯಜ್ಞಾತ, ಯಜ್ಞೋಪವೀತಂ ಸಮರ್ಪಯಾಮಿ । ತಸ್ಮಾದ್ಯಜ್ಞಾತ್ ಸರ್ವಹುತಋಚ, ಗಂಧಂ ಸಮರ್ಪಯಾಮಿ ।

Rarest Archiver

ತಸ್ಮಾದಶ್ವಾ; ಅಕ್ಷತಾನ್ ಸಮರ್ಪಯಾಮಿ । ಯತ್ಪುರುಷಂ, ಪರಿಮಳದ್ರವ್ಯಂ ಸಮರ್ಪಯಾಮಿ । ಬ್ರಾಹ್ಮಣೋಸ್ಯಮುಖ, ತುಲಸೀ ಪತ್ರಂ ಸಮರ್ಪಯಾಮಿ । ಚಂದ್ರಮಾಮನಸೋ ಜಾತ, ಪುಷ್ಪಂ ಸಮರ್ಪಯಾಮಿ । ನಾಭ್ಯಾ ಆಸೀ, ಧೂಪಂ ಸಮರ್ಪಯಾಮಿ । ಸಪ್ತಾಸ್ಯಾಸನ್, ದೀಪಂ ಸಮರ್ಪಯಾಮಿ । ಯಜ್ಞೇನಯಜ್ಞಮ, ನೈವೇದ್ಯಂ ಸಮರ್ಪಯಾಮಿ । ಪೂಗೀಫಲ ತಾಂಬೂಲಂ, ದಕ್ಷಿಣಾಂ ಚ ಸಮರ್ಪಯಾಮಿ । ಅತೋದೇವಾ, ನೀರಾಜನಂ ಸಮರ್ಪಯಾಮಿ । ಇದಂ ವಿಷ್ಣುರ್ವಿಚ, ಮಂತ್ರಪುಷ್ಪಾಂಜಲಿಂ ಸಮರ್ಪಯಾಮಿ । ತ್ರೀಣಿಪದಾವಿ, ಪ್ರದಕ್ಷಿಣಂ ಸಮರ್ಪಯಾಮಿ । ವಿಷ್ಣೋಃ ಕರ್ಮಾಣಿ ಪಶ್ಯತ, ನಮಸ್ಕಾರಾನ್ ಸಮರ್ಪಯಾಮಿ । ತದ್ವಿಷ್ಣೋಃ ಪರಮಂ ಪದಂ, .ಪ್ರಾರ್ಥನಂ ಸಮರ್ಪಯಾಮಿ । ಇತಿ ಷೋಡಶೋಪಚಾರೈಃ ಪೂಜಯೇತ್ ॥ ವಿಷ್ಣುಸ್ತೋತ್ರಾದಿ ಪಠಿತ್ವಾ ಯಸ್ಯಸ್ಮೃತ್ಯೇತ್ಯುಕ್ತ್ವಾ ಕರ್ಮಸಮಾಪಯೇತ್ ॥

ಪ್ರಾತರುತ್ಥಾಯ ಸ್ನಾತ್ವಾ ಶುಚಿರ್ಭೂತ್ವಾ ನಿತ್ಯಕರ್ಮಕೃತ್ವಾ ಆಚಮ್ಯ ಪ್ರಾಣಾನಾಯಮ್ಯ । ದೇಶಕಾಲೌ ಸಂಕೀರ್ತ್ಯ ॥ ಸ್ಥಂಡಿಲೇ ಗಣಪತಿಂ ಪೂಜಯಿತ್ವಾ ॥

ಆಚಾರ್ಯವರಣಂ :

ಬ್ರಾಹ್ಮಣಂ ಸಂಪೂಜ್ಯ ಅಮುಕಪ್ರವರಾನ್ವಿತೋಽಮುಕಗೋತ್ರೋಽಮುಕಶರ್ಮಾ ಯಜಮಾನೋಽಹಂ । ಅಮುಕ ಪ್ರವರಾನ್ವಿತ ಅಮುಕಗೋತ್ರೋತ್ಪನ್ನಂ ಋಗ್ವೇದಾಂತರ್ಗತ ಶಾಕಲ ಶಾಖಾಧ್ಯಾಯಿನಂ ಅಮುಕ ಶರ್ಮಾಣಂ ಬ್ರಾಹ್ಮಣಾಂ ಅಸ್ಮಿನ್ ವಿಷ್ಣುಪಂಚಕವ್ರತ್ಯೋದ್ಯಾಪನೇ ಆಚಾರ್ಯಂ ತ್ವಾಂ ವೃಣೇ ॥ ಇತಿ ವೃತ್ವಾ ಪ್ರಾರ್ಥಯೇತ್ ।

ಆಚಾರ್ಯಸ್ತು ಯಥಾ ಸ್ವರ್ಗೇ ಶಕ್ರಾದೀನಾಂ ಬೃಹಸ್ಪತಿಃ ।
ತಥಾ ತ್ವಂ ಮಮ ಯಜ್ಞೇಽಸ್ಮಿನ್ ಆಚಾರ್ಯೋ ಭವ ಸುವ್ರತ ॥
ವಿಪ್ರೋ ವೃತೋಽಸ್ಮಿ ಯಥಾಜ್ಞಾತಃ ಕರ್ಮಕರಿಷ್ಯಾಮಿ ॥ ಇತಿ ವದೇತ್ ॥

ಬ್ರಹ್ಮವರಣಂ :

ಯಥಾ ಚತುರ್ಮುಖೋ ಬ್ರಹ್ಮಾ ಸ್ವರ್ಗೇಲೋಕೇ ಪಿತಾಮಹಃ ।
ತಥಾ ತ್ವಂ ಮಮ ಯಜ್ಞೇಽಸ್ಮಿನ್ ಬ್ರಹ್ಮಾ ದ್ವಿಜಪತೇ ಭವ ॥
ಹೋಮಾರ್ಥಂ ತ್ವಾಂ ವೃಣೇ । ಜಪಾರ್ಥಂ ತ್ವಾಂ ವೃಣೇ ॥

ಅಥಾಚಾರ್ಯಃ ಆಚಮ್ಯ ಪವಿತ್ರಂ ಧೃತ್ವಾ

ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಯಜಮಾನೇನ ವಿಷ್ಣುಪಂಚಕ ವ್ರತೋದ್ಯಾಪನಾಖ್ಯೇ ಕರ್ಮಣಿ ವೃತೋಽಹಮಾಚಾರ್ಯ ಕರ್ಮಕರಿಷ್ಯೇ ॥ ಇತಿ ಸಂಕಲ್ಪ್ಯ

ಭೂ ಶುದ್ಧಿ - ಪೃಥ್ವಿತ್ವಯಾ । ಅಪಸರ್ಪಂತು ಯೇ ಭೂತಾ । ಪೌಷ್ಟಿಕರ್ಮಸಮಾರಭೇ । ಇತ್ಯಾಸನವಿಧಿಂ ಪ್ರಕಲ್ಪ್ಯ । ತತ್ವನ್ಯಾಸ ಮಾತೃಕಾನ್ಯಾಸಂ ಚ ಕೃತ್ವಾ ॥ ಕಲಶಸ್ಯ ಮುಖೇ ॥ ಇತಿ ಕಲಶಪೂಜಾಂ ಕೃತ್ವಾ । ಅಪವಿತ್ರಃ ಪವಿತ್ರೋವಾ ಇತಿ

Rarest Archiver

